# ಜನರ ಪ್ರಣಾಳಿಕೆ

## ಮಾರ್ಚ್ ೨೮, ೨೦೧೦ರಂದು ನಡೆಯುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ  ಅಭ್ಯರ್ಥಿಗಳೊಂದಿಗೆ ಚರ್ಚೆಗಾಗಿ

## ಬೆಂಗಳೂರು ಜನರ ವೇದಿಕೆ / ಬೆಂಗಳೂರು ಪೀಪಲ್ಸ್ ಫ಼ೋರಂ

ಆಕ್ಷನ್ ಏಡ್,ಅನೇಕ, ಪರ್ಯಾಯ ಕಾನೂನು ವೇದಿಕೆ, ಸೆಂಟರ್ ಫ಼ಾರ್ ಎಜುಕೇಷನ್ ಆಂಡ್ ಡಾಕ್ಯುಮೆಂಟೇಷನ್, ಬೆಂಗಳೂರು ಸ್ಲಂ ಜನರ ಕ್ರಿಯಾ ವೇದಿಕೆ, ಕಮ್ಯುನಿಟಿ ಹೆಲ್ತ್ ಸೆಲ್, ಕನ್ಸರ್ನ್ಡ್ ಫ಼ಾರ್ ವರ್ಕಿಂಗ್ ಚಿಲ್ಡ್ರನ್, ಎನ್ವಿರಾನ್‌ಮೆಂಟ್ ಸಪ್ಪೋರ್ಟ್ ಗ್ರೂಪ್, ಗಾರ್ಮೆಂಟ್ ಆಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಹಸಿರು ಉಸಿರು, ಜನಸಹಯೋಗ, ಜನಾರೋಗ್ಯ ಆಂದೋಲನ ಕರ್ನಾಟಕ, ಕಿಲಿಕಿಲಿ, ಮರಾ, ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್, ಸಮರ್ಥನಂ ಟ್ರಸ್ಟ್ ಫ಼ಾರ್ ಡಿಸೇಬಲ್ಡ್, ಸಂಗಮ, ಸೇವ್ ಬೆಂಗಳೂರು ಕಮಿಟಿ, ಸ್ಲಮ್ ಜಗತ್ತು, ದ ಅವೆನ್ಯೂ ರೋಡ್ ಟ್ರೇಡರ್ಸ್ ಅಸೋಸಿಯೇಶನ್, ಪರಿಶ್ಕರಣ್, ನಗರ ಸಂಷೋದನ ಕೇಂದ್ರ ಸಂಸ್ಥೆಗಳನ್ನು ಒಳಗೊಂಡ ಹಲವಾರು ಪ್ರಗತಿಪರ ಸಂಸ್ಥೆಗಳ ವೇದಿಕೆ



# Table of Contents


ಪರಿಚಯ – ೨

ಆಡಳಿತ – ೨

ಸಾರ್ವಜನಿಕ ಆರೋಗ್ಯ – ೪

ಅಡೆ ತಡೆ ರಹಿತ ವಾತಾವರಣ – ೫

ಸಾರ್ವಜನಿಕ ಸಂಚಾರ – ೫

ಸಂಸ್ಕೃತಿ – ೭

ಉದ್ಯಾನಗಳು ಹಾಗೂ ತೆರೆದ ಸ್ಥಳಗಳು – ೭

ಪಾರಂಪರಿಕ ಸ್ಥಳಗಳು – ೮

ನೈಸರ್ಗಿಕ ಸಂಪನ್ಮೂಲ ನಿರ್ವಹಣೆ – ೯

ಸಾರ್ವಜನಿಕ ಶಿಕ್ಷಣ – ೧೧

ಸಾಮಾಜಿಕ ನ್ಯಾಯ ಮತ್ತು ಜೀವನಾದಾರ – ೧೧

ಅಸಂಘಟಿತ ಕಾರ್ಮಿಕರ ರಕ್ಷಣೆ – ೧೨

ಹಿರಿಯರ ಕ್ಷೇಮಾಭಿವೃದ್ಧಿ – ೧೩

ಬಾಲ ಕಾರ್ಮಿಕತೆ – ೧೩

ಮಕ್ಕಳ ಹಕ್ಕುಗಳು – ೧೪

ನಗರದ ಬಡತನ – ೧೪

ಪ್ರಾಣಿಗಳ ಕ್ಷೇಮಾಭಿವೃದ್ಧಿ – ೧೪

ತುರ್ತು ಸಂದರ್ಭಗಳಲ್ಲಿ – ೧೫

ತ್ಯಾಜ್ಯ ನಿರ್ವಹಣೆ – ೧೫

ಸಂಪರ್ಕ್ಕಾಗಿ – ೧೭






# ಪರಿಚಯ

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಆದರಿಸಿ ನ್ಯಾಯಲಯಗಳು ತೀರ್ಪು ನೀಡಿದ ಹಿನ್ನೆಲೆಯಲ್ಲಿ, ಬೆಂಗಳೂರಿನ ನಾಗರಿಕರಿಗೆ ತಮ್ಮ ಸ್ಥಳೀಯ ಸರ್ಕಾರವನ್ನು ಆಯ್ಕೆ ಮಾಡುವ ಹಕ್ಕಿನಿಂದ ವಂಚಿತಗೊಳಿಸುವ ಕರ್ನಾಟಕ ಸರ್ಕಾರದ ಎಲ್ಲ ಯತ್ನಗಳನ್ನೂ ಸೆಯೆಸ್..ೂೀಲಿಸಲಾಗಿದೆ. ಇದರ ಪರಿಣಾಮವಾಗಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ (ಬಿಬಿಎಮ್‌ಪಿ) ಚುನಾವಣೆಗಳನ್ನು ೨೮ ಮಾರ್ಚ್, ೨೦೧೦ರಂದು ಘೋಷಿಸಲಾಗಿದೆ.

೩೫ ವರ್ಷಗಳಿಂದ, ನಗರದಲ್ಲಿ ಚುನಾಯಿತ ಸಂಸ್ಥೆ ಇಲ್ಲದಿರುವಿಕೆಯಿಂದ ತಮ್ಮ ನಗರದ ಕುರಿತು ತೀರ್ಮಾನಿಸುವ್ ಬೆಂಗಳೂರು ನಿವಾಸಿಗಳ ಹಕ್ಕನ್ನು ಅವರಿಂದ ಕಸಿದುಕೊಳ್ಳಲಾಗಿದೆ. ಈ ಅವಧಿಯಲ್ಲಿ, ಅತ್ಯಧಿಕವಾಗಿ ಕೇಂದ್ರಿಕೃತವಾದ ಹಾಗೂ ಹೊಣೆಗಾರಿಕೆ ಇಲ್ಲದ ಅಧಿಕಾರಶಾಹಿ ಆಡಳಿತವು ತಮ್ಮ ಆಳ್ವಿಕೆ ನಡೆಸಿ, ಸ್ಥಳೀಯ ನಿರ್ಣಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಅವಕಾಶವನ್ನು ನಾಗರಿಕರಿಗೆ ಇಲ್ಲದಂತಾಗಿಸಿತು. ಇದರ ಪ್ರಭಾವವನ್ನು ಎಲ್ಲೆಡೆ ಕಾಣಬಹುದು: ಯೋಜನೆಗಳು ಹಾಗೂ ಕಾಮಗಾರಿಗಳಿಗೆ, ಸಂಪೂರ್ಣವಾಗಿ ಪಾರದರ್ಶಕ ರಹಿತ ರೀತಿಯಲ್ಲಿ ಹಣ ಹಾಗೂ ಸಾರ್ವಜನಿಕ ಸಂಪನ್ಮೂಲಗಳ ಹೂಡಿಕೆ ಮಾಡಿ, ಮೂಲಭೂತ ಸೇವೆಗಳ ಗುಣಮಟ್ಟವು ಗಮನಾರ್ಹವಾಗಿ ಇಳಿಮುಖವಾಗಿರುವುದನ್ನು ನೋಡಬಹುದು.

ಸ್ಥಳೀಯ ಸಂಸ್ಥೆಯೊಂದಿಗಿನ ನಮ್ಮ ಸಂಬಂದವನ್ನು ಪುನರ್ ಸ್ಥಾಪನೆಮಾಡಿ ನಮ್ಮ ನಗರವನ್ನು ಮುನ್ನೆಡಸುವ ಮತ್ತು ಪುನರ್ ಸಂಘಟಿಸುವ ಅವಕಾಶವು ಇದೀಗ ಒದಗಿಬಂದಿದೆ. ನಮ್ಮ ನಗರವನ್ನು ರೂಪಿಸುವಲ್ಲಿ ನಗರಪಾಲಿಕೆಯ ಚುನಾವಣೆಗಳು ಪ್ರಮುಖ ಅಂಶವಾಗಿದೆ. ನಾವು ಸರಿಯಾದ ಅಭ್ಯರ್ಥಿಯನ್ನು ಆಯ್ಕೆ ಮಾಡದೆ ಇದ್ದಲ್ಲಿ, ಅದರ ಪರಿಣಾಮಗಳಿಗೆ ನಾವೇ ಹೊಣೆಯಾಗುತ್ತೇವೆ. ಹಾಗಾಗಿ ಜನರ ನಿಜವಾದ ಅಗತ್ಯ ವಿಷಯಗಳ ಬಗ್ಗೆ ಅಭ್ಯರ್ಥಿಗಳಿಂದ ಸಮ್ಮತಿ ಪಡೆದು ಚುನಾಯಿಸಿದರೆ, ಅವರ ಅಧಿಕಾರದ ಅವಧಿಯಲ್ಲಿ ಚುನಾವಣೆಯ ಆಶ್ವಾಸನೆಗಳನ್ನು ಪೂರೈಸುವ ಸಾಧ್ಯತೆ ಇರುತ್ತದೆ.

ಈ ನಿಟ್ಟಿನಲ್ಲಿ, ನಗರದ ಹಲವಾರು ಸಮುದಾಯಗಳೊಡನೆ ನಗರಕ್ಕೆ ಸಂಧಿಸಿದ ವಿಷಯಗಳನ್ನು ಚರ್ಚಿಸಿ, ಜನ ಪ್ರಣಾಳಿಕೆಯನ್ನು ರೂಪಿಸಲು ನಗರದ ಅನೇಕ ಸಂಘ ಸಂಸ್ಥೆಗಳು ಹಲವಾರು ಸುತ್ತಿನ ಸಭೆಗಳಲ್ಲಿ ಚರ್ಚೆಗಳನ್ನು ನಡೆಸಿದ ಆಧಾರದ ಮೇಲೆ, ಈ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಯಿತು. ಬೆಂಗಳೂರಿನ ಜನರಿಗೆ ಹಕ್ಕಾಗಿ ದೊರೆಯಬೇಕಾದ ಹಲವಾರು ಪ್ರಗತಿಪರ ಕಾರ್ಯನೀತಿಗಳು ಹಾಗೂ ಕ್ರಮಗಳ ಸಾರವೇ ಈ ಪ್ರಣಾಳಿಕೆ.

ಬಿಬಿಎಮ್‌ಪಿ ಚುನಾವಣೆಯಲ್ಲಿ ಭಾಗವಹಿಸುವಾಗ ಸಾದ್ಯವಾದಷ್ಟು ಸರಿಯಾದ ಆಯ್ಕೆಯನ್ನು ಮಾಡಲು ಮತದಾರರಾಗಿ, ಅಭ್ಯರ್ಥಿಯಾಗಿ, ಸಾಮಾಜಿಕ ಕಾರ್ಯಕರ್ತರಾಗಿ ತಾವು, ಈ ಪ್ರಣಾಳಿಕೆಯನ್ನು ಬಳಸಬೇಕೆಂದು ನಮ್ಮ ಒತ್ತಾಸೆ.

# ಆಡಳಿತ

ನಗರಪಾಲಿಕಾ ಕಾಯಿದೆಯ ಅರ್ಥಪೂರ್ಣ ಹಾಗೂ ಸಂಪೂರ್ಣ ಅನುಷ್ಠಾನವನ್ನು ಮಾಡಲೂ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು:

<u>ಬಿಬಿಎಮ್‌ಪಿ ಆಡಳಿತ:</u>

- ಮಹಾಪೌರನ್ನು ಬಿಬಿಎಮ್‌ಪಿ ಕಾರ್ಪೋರೇಟರ್‌ಗಳಿಂದಲೇ ಆಯ್ಕೆ ಮಾಡಿ ೨.೫ ವರ್ಷ ಪುನರ್ ಆಯ್ಕೆಗೆ ಅವಕಾಶವಿಲ್ಲದಂತೆ ಅಧೀಕಾರ ನೀಡ ಬೇಕು.





- ಮಹಾಪೌರರ ಸ್ಥಾನವು ಪುರುಷ–ಮಹಿಳೆಯರ ಸಮಾನ ಅವಕಾಶವಿರಬೇಕು.
- ಎಲ್ಲ ಅವಕಾಶ ವಂಚಿತ ಗುಂಪುಗಳು ಅಂದರೆ, ದಲಿತ, ಅಲ್ಪಸಂಖ್ಯಾತ ಇತರೆ ಅಲ್ಪಸಂಖ್ಯಾತ ಗುಂಪುಗಳ ಅರ್ಥಪೂರ್ಣ ಭಾಗವಹಿಸುವಿಕೆಯನ್ನು ಖಚಿತಪಡಿಸುವಂತೆ, ಅವರನ್ನು ಒಳಗೊಂಡೊಂತೆ ಬಿಬಿಎಮ್‌ಪಿಯ ಆಡಳಿತವು ಕಾರ್ಯ ನಿರ್ವಹಿಸಬೇಕು.

<u>ವಾರ್ಡ್ ಸಮಿತಿಯ ಕಾರ್ಯನಿರ್ವಹಣೆ:</u>

- ನಗರಾಡಳಿತದ ಮೂಲಭೂತ ಘಟಕವಾಗಿ, ಪ್ರತಿ ವಾರ್ಡ್‌ನಲ್ಲೂ ವಾರ್ಡ್ ಸಮಿತಿಗಳನ್ನು ಸ್ಥಾಪಿಸಿ, ಅದರ ಮೂಲಕ ಪ್ರಜಾಪ್ರಭುತ್ವಾತ್ಮಕ ಭಾಗವಹಿಸುವಿಕೆಯನ್ನು ಖಚಿತ ಪಡಿಸಬೇಕು.
- ವಾರ್ಡ್ ಸಮಿತಿಯ ಸದಸ್ಯರನ್ನು ನೇರವಾಗಿ ಚುನಾಯಿಸಬೇಕು.
- ವಾರ್ಡ್ ಸಮಿತಿಗಳು ಸ್ವಾಯತತ್ತವಾಗಿ ಕಾರ್ಯನಿರ್ವಹಿಸಲು ಸೂಕ್ತವಾದ ಆಡಳಿತಾತ್ಮಕ ಹಾಗೂ ಆರ್ಥಿಕ ಸಂಪನ್ಮೂಲಗಳನ್ನು ನೀಡಬೇಕು ಇದರಿಂದಾಗಿ ಮಾತ್ರ ಎಲ್ಲಾ ವರ್ಗಗಳನ್ನು ಒಳಗೊಂಡ ನಗರವನ್ನು ನಿರ್ಮಿಸುವುದು ಸಾದ್ಯ.
- ವಾರ್ಡ್ ಸಮಿತಿಯ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿ ತೆರೆದ ವೇದಿಕೆಗಳಾಗಬೇಕು ಹಾಗು ಕಡ್ಡಾಯವಾಗಿ ಪ್ರತಿ ತಿಂಗಳೂ ಸಭೆಯನ್ನು ನಡೆಸತಕ್ಕದ್ದು.

<u>ವಾರ್ಡ್ ಸಮಿತಿಯ ಪ್ರತಿನಿಧಿತ್ವ:</u>

- ಸಮಾಜದ ವೈವಿಧ್ಯತೆಯನ್ನು, ಅದರಲ್ಲೂ ವಿಶೇಷವಾಗಿ ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು, ನಗರದ ಬಡಜನರು ಹಾಗೂ ಸಮಾಜದ ಇತರ ಮೂಲಗುಂಪಾದ ಜನರನ್ನು ಪ್ರತಿನಿಧಿಸುವ ರೀತಿಯಲ್ಲಿ, ವಾರ್ಡ್ ಸಮಿತಿಯ ಸದಸ್ಯರು ಚುನಾಯಿತರಾಗಬೇಕು. ವಾರ್ಡ್ ಸಮಿತಿಯ ಸಭೆಗಳಲ್ಲಿ ಮಕ್ಕಳ ಪ್ರತಿನಿಧಿಗಳು ಭಾಗವಹಿಸುವಂತೆ ಅವರಿಗೆ ಉತ್ತೇಜಿಸಿ, ನೆರವು ನೀಡಬೇಕು.
- ಮಕ್ಕಳ ಗ್ರಾಮ ಸಭೆಗಳನ್ನು ಎಲ್ಲ ಪಂಚಾಯತಿಗಳಲ್ಲೂ ಕಡ್ಡಾಯ ಮಾಡಿರುವಂತೆ, ಮಕ್ಕಳ ವಿಶೇಷ ವಾರ್ಡ್ ಸಮಿತಿಯ ಸಭೆಗಳನ್ನು ನಡೆಸಬೇಕು.

<u>ಬಿಬಿಎಮ್‌ಪಿಯ ಆಯವ್ಯಯ:</u>

- ವಾರ್ಡ್ ಹಂತದಿಂದ ಮೇಲಕ್ಕೆ, ಬಿಬಿಎಮ್‌ಪಿಯ ಆಯವ್ಯಯ ಪತ್ರವನ್ನು ರೂಪಿಸಿ, ಅದನ್ನು ಪಾರದರ್ಶಕ, ಹೊಣೆಗಾರಿಕೆಯ ಹಾಗೂ ಸಹಭಾಗಿತ್ವದ ರೀತಿಯಲ್ಲಿ ನಿರ್ವಹಿಸಬೇಕು.
- ಬಿಬಿಎಮ್‌ಪಿಯ ಎಲ್ಲ ಕಡ್ಡಾಯದ ಹಾಗೂ ನಿಯೋಜಿತ ಪೌರ ಸೇವೆಗಳಿಗೆ ಸೂಕ್ತವಾದ ಹಣದ ವ್ಯವಸ್ಥೆ ಆಗಬೇಕು. ಇದಕ್ಕೆ ಯಾವುದೆ ಕಾರಣಕ್ಕೂ ಹಣದ ಕೊರತೆ ನೆಪವಾಗಬಾರದು.
- ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳುತ್ತಿರುವ ಅಥವ ಕೈಗೊಳ್ಳಲಿರುವ ಯೋಜನೆಗಳಿಗೆ ಮಾಡುವ ಹೂಡಿಕೆಯನ್ನು ಬಿಬಿಎಮ್‌ಪಿ ಬಜೆಟ್‌ನ ಅಂಶವಾಗಿ ಮಾತ್ರ ನಿರ್ವಹಿಸಬೇಕು.ಹಾಗಾಗಿ ಸಾಲಗಳು ಹಾಗು ಹೊರಗಿನ ಸಂಪನ್ಮೂಲಗಳು ಬಿಬಿಎಂಪಿ ಆಯವ್ಯಯದ ಮಾಲಕ ಬಂದರೆ ಮಾತ್ರ ಅವುಗಳನ್ನು ಒಪ್ಪಬೇಕು.
- ಬಿಬಿಎಮ್‌ಪಿ ಬಜೆಟ್‌ನಲ್ಲಿ ಹಣಕಾಸಿನ ನಿಯೋಜನೆಗೆ, ಸಾಮಾಜಿಕ ಸಮಾನತೆ ಆದಾರವಾಗಬೇಕು.
- ಯೋಜನೆಗಳಲ್ಲಿ ಮಾಡುವ ಸಂಪನ್ಮೂಲಗಳ ಹೂಡಿಕೆ ಹಾಗೂ ವಿತರಣೆಯು ಸಮಾನುಪಾತದಲ್ಲಿ ಇರಬೇಕು, ಹಾಗೂ, ಕಡೆಗಣಿತ ಗುಂಪುಗಳಾದ ನಗರದ ಬಡಜನರು, ಮಹಿಳೆಯರು, ಮಕ್ಕಳು, ವಯಸ್ಸಾದವರು, ಅಂಗವಿಕಲರು, ಅಂತರಲಿಂಗಿಯರು, ಬೀದಿ ಹಾಗೂ ದುಡಿಯುವ ಮಕ್ಕಳು, ಇತ್ಯಾದಿಗಳ ವಾಸ್ತವ ಜನಸಂಖ್ಯೆಯ ಆಧಾರವನ್ನು ಪಡೆದಿರಬೇಕು.
- ಬಿಬಿಎಮ್‌ಪಿಯ ಪರಿಮಿತಿಯಲ್ಲಿ ಬರುವ ಭೂ ಹಾಗೂ ಆಸ್ತಿಯ ಕಂದಾಯದ ವರಮಾನವನ್ನು ಬಿಬಿಎಮ್‌ಪಿಯ





ನಿರ್ವಹಣೆಗಾಗಿ ಮೀಸಲಿಡಬೇಕು.

<u>ನಗರ ಹಾಗೂ ಪ್ರಾದೇಶಿಕ ಯೋಜನೆ:</u>

- ನಗರಪಾಲಿಕಾ ಕಾಯಿದೆಯ ಅನುಸಾರವಾಗಿ, ಮಹಾನಗರ ಯೋಜನಾ ಸಮಿತಿಯನ್ನು (ಎಮ್‌ಪಿಸಿ) ಕೂಡಲೇ ಸ್ಥಾಪನೆ ಮಾಡಬೇಕು.
- ಎಮ್‌ಪಿಸಿ ಅಭಿವೃದ್ಧಿಪಡಿಸಿದ ಯೋಜನೆಗಳ ಆಧಾರದ ಮೇಲೆ, ಬಿಬಿಎಮ್‌ಪಿಯು ಯೋಜನೆಗಳು, ವ್ಯವಸ್ಥೆಗಳು ಹಾಗೂ ಮೂಲ ಸೌಕರ್ಯಗಳನ್ನು ಅನುಷ್ಠಾನಗೊಳಿಸಬೇಕು.
- ಅಸ್ತಿತ್ವದಲ್ಲಿರುವ ಜನರ ಸಹಭಾಗಿತ್ವವಿಲ್ಲದ, ಜನಪರವಲ್ಲದ ಬಿಡಿಎ, ಬಿಎಮ್‌ಆರ್‌ಡಿಎ, ಮುಂತಾದ ಎಲ್ಲ ಪ್ಯಾರಾಸ್ಟಾಟಲ್, ಸಂಸ್ಥೆಗಳನ್ನು ತಕ್ಷಣವೇ ಮುಚ್ಚ ಬೇಕು. ಅವರ ತಾಂತ್ರಿಕ ಸಾಮರ್ಥ್ಯವನ್ನು ಬಿಬಿಎಮ್‌ಪಿಯೊಂದಿಗೆ ವಿಲೀನಗೊಳಿಸಬಹುದು.
- ಸಂವಿಧಾನದ ೧೨ನೆಯ ಶೆಡ್ಯೂಲ್‌ನಲ್ಲಿ ಪಟ್ಟಿಮಾಡಲಾಗಿರುವ ವಿಷಯಗಳಿಗೆ ಸಂಬಂಧಿಸಿದ ಯೋಜನೆಗಳು ಹಾಗೂ ವ್ಯವಸ್ಥೆಗಳ ಅನುಷ್ಠಾನಕ ಸಂಸ್ಥೆಯಾಗಿ ಬಿಬಿಎಮ್‌ಪಿಗೆ ಉನ್ನತ ಸ್ಥಾನವನ್ನು ನೀಡಬೇಕು. ಅದರ ಪರಿಣಾಮವಾಗಿ, ಆಹಾರ, ನೀರು, ಸೂರು, ಪ್ರಾಥಮಿಕ ಆರೋಗ್ಯ, ಶಿಕ್ಷಣ, ಇತ್ಯಾದಿ ವಿಷಯಗಳನ್ನು ನೋಡಿಕೊಳ್ಳುವ ವಿವಿಧ ಪ್ಯಾರಾಸ್ಟಾಟಲ್ ಸಂಸ್ಥೆಗಳಲ್ಲಿ ಹಂಚಿಹೋದ ನಿಧಿಗಳು, ಕಾರ್ಯಚಟುವಟಿಕೆಗಳು, ಕಾರ್ಯನಿರ್ವಾಹಕರನ್ನು, ಬಿಬಿಎಮ್‌ಪಿಯ ಅಡಿಯಲ್ಲಿ ಕಾಯನಿರ್ವಹಿಸುವಂತೆ ಪುನರ್ ನಿಯೋಜಿಸಬೇಕು.
- ಅಬೈಡ್‌ನಂತಹ ಸಂವಿದಾನ ಹಾಗು ಕಾನೂನುಬಾಹಿರ ಸಂಸ್ಥೆಗಳನ್ನು ತಕ್ಷಣವೇ ಕೈಬಿಡಬೇಕು. ಅಬೈಡ್ ಹಾಗೂ ಅದೇ ರೀತಿಯ ಇತರ ಸಂಸ್ಥೆಗಳು ಕೈಗೊಳ್ಳುವ ಹಾಗೂ ಸ್ಥಾಪಿಸಿದ ಎಲ್ಲ ಯೋಜನೆಗಳನ್ನು ಈ ಕೂಡಲೇ ನಿಲ್ಲಿಸಿ ಜಂಟಿ ಶಾಸಕಾಂಗ ಸಮಿತಿ ಹಾಗೂ ಬಿಬಿಎಮ್‌ಪಿಯ ಸಂಪೂರ್ಣ ಪರಿಶೀಲನೆಗೆ ಒಳಗೊಳ್ಳಬೇಕು.

ಪ್ರತಿನಿಧಿತ್ವ:

- ಬಿಬಿಎಮ್‌ಪಿಯಲ್ಲಿನ ಸ್ಥಾನಗಳ ಮೀಸಲಾತಿಯನ್ನು ಕೇಂದ್ರ ಹಾಗೂ ರಾಜ್ಯ ಕಾನೂನುಗಳ ಆದಾರದಲ್ಲಿ ಮೀಸಲಿಡಬೇಕು.
- ತನ್ನ ಸರಹದ್ದಿಗೆ ಬರುವ ಎಲ್ಲ ಮಂಡಲಿ ಹಾಗೂ ಸಮಿತಿಗಳಲ್ಲಿ ಮಹಿಳೆಯರಿಗೆ ೫೦% ಮೀಸಲಾತಿ, ಹಾಗೂ ವಿಕಲಚೇತನ ವ್ಯಕ್ತಿಗಳಿಗೆ ಸೂಕ್ತ ಪ್ರತಿನಿಧಿತ್ವವನ್ನು ಖಚಿತಪಡಿಸಿಕೊಳ್ಳುವ ಮೂಲಕ, ಬಿಬಿಎಮ್‌ಪಿಯು ದೇಶಕ್ಕೆ ಮಾದರಿಯಾಗಬೇಕು.

# ಸಾರ್ವಜನಿಕ ಆರೋಗ್ಯ

- ಎಲ್ಲ ಬಿಬಿಎಮ್‌ಪಿ ಕಾರ್ಯಕ್ರಮಗಳು ಹಾಗೂ ಯೋಜನೆಗಳಲ್ಲಿ "ಎಲ್ಲರಿಗೂ ಆರೋಗ್ಯ" ಎಂಬ ಮೂಲಭೂತ ಹಕ್ಕಿನ ರಕ್ಷಣೆಯನ್ನು ಮಾಡಬೇಕು.
- ಬಿಬಿಎಮ್‌ಪಿ ಸುಪರ್ದಿಯಲ್ಲಿರುವ ಎಲ್ಲ ಆರೋಗ್ಯ ಕೇಂದ್ರಗಳೂ ಸಮಗ್ರ ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಪರಿವರ್ತನೆಗೊಳ್ಳಬೇಕು. ಪ್ರತಿ ೫೦,೦೦೦ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ, ಪ್ರತಿ ೧೦,೦೦೦ ಜನಸಂಖ್ಯೆಗೆ ಒಂದು ಉಪಕೇಂದ್ರವು ಸ್ಥಾಪಿಸಬೇಕು.
- ವಾರ್ಡ್ ಸಮಿತಿಗಳು ಸಾರ್ವಜನಿಕ ಆರೋಗ್ಯ ಕೇಂದ್ರಗಳು ಹಾಗೂ ಉಪ-ಕೇಂದ್ರಗಳ ಆರೋಗ್ಯ ಸೇವೆಗಳ ಮೇಲ್ವಿಚಾರಣೆ ಹಾಗೂ ಯೋಜನೆಯಲ್ಲಿ ಮೂಲಭೂತ ಪಾತ್ರವನ್ನು ವಹಿಸಬೇಕು.
- ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ಖಾಸಗೀಕರಣಗೊಳಿಸಬಾರದು.
- ಸಾರ್ವಜನಿಕ ಆರೋಗ್ಯ ಮಾನದಂಡಗಳ ಆದಾರದಲ್ಲಿ ಆರೋಗ್ಯ ಸೌಲಭ್ಯಗಳನ್ನು ಪೂರೈಸಲು ಸೂಕ್ತ

ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕು.

- ಬಿಬಿಎಮ್‌ಪಿಯ ಯಾವುದೇ ಆರೋಗ್ಯ ಕೇಂದ್ರಗಳಲ್ಲಿ ಬಳಕೆದಾರರ ಶುಲ್ಕವನ್ನು ವಿಧಿಸಬಾರದು.
- ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸೂಕ್ತ ಪ್ರಾಮಾಣದಲ್ಲಿ ಅವಶ್ಯಕ ಔಷಧಗಳನ್ನು ಸರಬರಾಜು ಮಾಡಬೇಕು.
- ಭ್ರಷ್ಟಾಚಾರ ಮುಕ್ತವಾದ, ಒಳ್ಳೆಯ ಗುಣಮಟ್ಟದ ಸೇವೆಗಳು ದೊರೆಯುವಂತೆ ಖಚಿತಪಡಿಸಿಕೊಳ್ಳಲು, ಎಲ್ಲ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ದೂರಿನ ಕೋಶವನ್ನು ಸ್ಥಾಪಿಸಬೇಕು ಹಾಗೂ ಶುಲ್ಕ-ಮುಕ್ತ ದೂರವಾಣಿ ಸಂಖ್ಯೆಯನ್ನು ಸ್ಥಾಪಿಸಬೇಕು.
- ಆರೋಗ್ಯ ಕೇಂದ್ರಗಳಲ್ಲಿ ನೇಮಕಗೊಂಡ ಸಮುದಾಯ ಆರೋಗ್ಯ ತಜ್ಞರ ಮೂಲಕ, ವಿಶೇಷ ಅಗತ್ಯಗಳಿರುವ ಸಮುದಾಯಗಳಿಗೆ ಆರೋಗ್ಯ ಸೇವೆಗಳನ್ನು ಒದಗಿಸಬೇಕು
- ಖಾಸಗಿ ಆರೋಗ್ಯ ಸಂಸ್ಥೆಗಳಲ್ಲಿನ ಸುಲುಗೆಯನ್ನು ನಿಯಂತ್ರಿಸುವಲ್ಲಿ, ಬಿಬಿಎಮ್‌ಪಿಯು ಕ್ರಮ ಕೈಗೊಳ್ಳ ಬೇಕು.

# ಅಡೆ ತಡೆ ರಹಿತ ವಾತಾವರಣ

- ಸಾರ್ವಜನಿಕ ಸ್ಥಳಗಳು, ಸಂಸ್ಥೆಗಳು, ರಸ್ತೆಗಳು, ಬಸ್ ಹಾಗು ರೈಲು ನಿಲ್ದಾಣಗಳು, ವಿಮಾನ ನಿಲ್ದಾಣ, ಬ್ಯಾಂಕುಗಳು, ಶಾಲೆಗಳು, ಸಾರ್ವಜನಿಕ ಕಛೇರಿಗಳು, ಉದ್ಯಾನಗಳು, ಇತ್ಯಾದಿ ಸಂಪೂರ್ಣವಾಗಿ ಅಡೆ ತಡೆ ರಹಿತವಾಗಿರಬೇಕು. (ವಿಕಲ ಚೇತನರಿಗೆ ಲಭ್ಯವಾಗುವಂತೆ)
- ಇದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ಈ ಎಲ್ಲ ಸೌಲಭ್ಯಗಳ ಸಾರ್ವಜನಿಕ ಪರಿಶೋಧನೆಯನ್ನು ಬಿಬಿಎಮ್‌ಪಿಯು ನಡೆಸಬೇಕು.
- ಬಿಬಿಎಮ್‌ಪಿಯು ಅಂಗವಿಕಲತೆಯಿರುವ ವ್ಯಕ್ತಿಗಳ ಹಕ್ಕಿನ ಅನುಷ್ಠಾನ ಹಾಗೂ ರಕ್ಷಣೆಯನ್ನು ಮಾಡಲು, ವಿಶೇಷ ಘಟಕವನ್ನು ಸ್ಥಾಪಿಸಬೇಕು.
- ಪಾದಚಾರಿಗಳ ಅಡಿರಚನೆಯ ವಿನ್ಯಾಸ ಹಾಗೂ ಅಭಿವೃದ್ಧಿಯನ್ನು ಮಾಡುವಾಗ, ಅಂಗವಿಕಲರು ಹಾಗೂ ಮಕ್ಕಳ ಅಗತ್ಯಗಳನ್ನು ಸಂಪೂರ್ಣವಾಗಿ ಪೂರೈಸಬೇಕು.
- ವಾರ್ಡ್ ಮಟ್ಟದಿಂದ ಮೇಲಕ್ಕೆ ಅಭಿವೃದ್ಧಿಗೊಳ್ಳುವ ಯೋಜನೆಗಳು ಹಾಗೂ ವ್ಯವಸ್ಥೆಗಳಲ್ಲಿ ಅಂಗವಿಕಲರ ಮಾಹಿತಿ ಪದ್ಧತಿಗಳನ್ನು ಸಮನ್ವಯಗೊಳಿಸಬೇಕು.

# ಸಾರ್ವಜನಿಕ ಸಂಚಾರ

- ಚಲನವಲನದ ಎಲ್ಲ ಸ್ಥಳಗಳಲ್ಲೂ ಪಾದಚಾರಿಗಳು ಹಾಗೂ ಸೈಕಲ್ ಸವಾರರ ಹಕ್ಕನ್ನು ರಕ್ಷಿಸಬೇಕು. ಇಂತಹ ಎಲ್ಲಾ ಸ್ಥಳಗಳನ್ನೂ ಇವರಿಗೆ ಅನುಗುಣವಾಗಿ ಪರಿವರ್ತಿಸ ಬೇಕು. ಪಾದಚಾರಿಗಳು, ಸೈಕಲ್ ಸವಾರರು, ವಿಕಲ ಚೇತನರು, ಮಕ್ಕಳು ಹಾಗೂ ಹಿರಿಯ ನಾಗರಿಕರಿಗೆ ಪ್ರಾಮುಖ್ಯತೆ ಹಾಗೂ ರಕ್ಷಣೆಯನ್ನು ಖಾತರಿಪಡಿಸಬೇಕು.
- ನಗರದ ಯಾವುದೇ ಸ್ಥಳಕ್ಕೆ ಸೈಕಲ್‌ನ್ನು ಬಳಸುವಂತೆ, ಸೈಕಲ್‌ಗಳು ಮಾತ್ರ ಹೋಗುವ ಮಾರ್ಗಗಳನ್ನು





ನಿರ್ಮಿಸಬೇಕು. ಸೈಕಲ್ ಸವಾರಿ, ನಡಿಗೆಯನ್ನು ಉತ್ತೇಜಿಸುವ ಸಲುವಾಗಿ, ನೆರಳನ್ನು ನೀಡುವ ಸಾಲುಮರಗಳನ್ನು ಎಲ್ಲ ರಸ್ತೆಗಳಲ್ಲೂ ತಪ್ಪದೇ ನೆಡಬೇಕು.

- ಸೈಕಲ್ ಸವಾರಿ, ನಡಿಗೆ ಹಾಗೂ ಇತರ ಇಂಗಾಲ–ವಿಮುಕ್ತ ಆಚರಣೆಗಳನ್ನು ಉತ್ತೇಜಿಸಲು ಬಿಬಿಎಮ್‌ಪಿಯಲ್ಲಿ ಘಟಕವನ್ನು ಸ್ಥಾಪಿಸಬೇಕು.
- ಪಾದಚಾರಿ ರಸ್ತೆ ದಾಟುವಿಕೆಗಳನ್ನು ಕಡ್ಡಾಯವಾಗಿ ರಸ್ತೆಯ ಮಟ್ಟದಲ್ಲೇ ಮಾಡಬೇಕು.
- ಸಿಗ್ನಲ್ ಮುಕ್ತ ಮಾರ್ಗಗಳನ್ನು ತಕ್ಷಣವೇ ರದ್ದುಗೊಳಿಸಬೇಕು, ಏಕೆಂದರೆ ಅವು ಅಂಗವಿಕಲರು ಹಾಗೂ ಹಿರಿಯರ ಜೀವಕ್ಕೆ ಅಪಾಯವಾಗಿದೆ ಮತ್ತು ಹಲವು ಜನರನ್ನು ಸ್ಥಳಾಂತರ ಮಾಡಿ ಅವರ ಜೀವನೋಪಾಯವನ್ನು ಕಸೆದು ಕೊಳ್ಳುತ್ತಿದೆ.
- ವಾರಾಂತ್ಯದಲ್ಲಿ, ಜನಪ್ರಿಯ ಸಾರ್ವಜನಿಕ ಸ್ಥಳಗಳು, ವ್ಯಾಪಾರ ಸ್ಥಾನಗಳು ಹಾಗೂ ನಗರದ ಕೇಂದ್ರ ಪ್ರದೇಶಗಳನ್ನು ಕೇವಲ ಪಾದಚಾರಿ ಹಾಗೂ ಸೈಕಲ್ ಪ್ರದೇಶಗಳಾಗಿ ಮೀಸಲಿಡಬೇಕು.
- ರಸ್ತೆ ಅಪಘಾತಗಳಿಗೆ ತುತ್ತಾದವರಿಗೆ ಸಮಗ್ರ ಅಪಘಾತ ನೆರವಿನ ಪ್ಯಾಕೇಜ್‌ನ್ನು ಒದಗಿಸಬೇಕು.
- ಎಲ್ಲ ರಸ್ತೆಗಳಲ್ಲೂ ಸಾರ್ವಜನಿಕ ಬಸ್‌ಗಳಿಗೆ ಆದ್ಯತೆಯನ್ನು ನೀಡಬೇಕು.
- ಎಲ್ಲ ಸಾರ್ವಜನಿಕ ಸಂಚಾರ ಪ್ರದೇಶಗಳ ಅಭಿವೃದ್ಧಿಗಾಗಿ ಎಮ್‌ಪಿಸಿ ರೂಪಿಸಿದ ಯೋಜನೆಗಳು ಆಧಾರವಾಗಬೇಕು.
- ಸಮಾಜದ ಎಲ್ಲ ವರ್ಗದ ಜನರಿಗೂ ಲಭ್ಯವಾಗುವ ಹಾಗೂ ಅಗ್ಗದ ಸಾರ್ವಜನಿಕ ಸಂಚಾರಿ ಸೌಲಭ್ಯಗಳನ್ನು ಸ್ಥಾಪಿಸಬೇಕು.
- ನಗರದ ಬಡಜನರು, ವಲಸಿಗ ಕಾರ್ಮಿಕರು ಹಾಗೂ ಹವಾಮಾನ_ನಿರಾಶ್ರಿತರಿಗೆ ಅನುದಾನಿತ ದೈನಂದಿನ ಹಾಗೂ ತಿಂಗಳ ಸಾರ್ವಜನಿಕ ಸಂಚಾರದ ಪಾಸ್‌ಗಳ ವ್ಯವಸ್ಥೆಯನ್ನು ಮಾಡಬೇಕು.
- ಅಧಿಕ ನಿಲುಗಡೆಯ ಶುಲ್ಕಗಳಂತಹ ಬಲವಾದ ನಿರೋಧಕಗಳನ್ನು ಪರಿಚಯಿಸುವ ಮೂಲಕ, ಜನದಟ್ಟಣೆಯಿರುವ ಪ್ರದೇಶಗಳು ಹಾಗೂ ನಗರದ ಕೇಂದ್ರಗಳಲ್ಲಿ ಖಾಸಗಿ ವಾಹನಗಳ ಬಳಕೆಯನ್ನು ವಿರೋಧಿಸಬೇಕು.
- ಪ್ರಮುಖ ರಸ್ತೆಗಳಲ್ಲಿ ನಿಲುಗಡೆಯನ್ನು ನಿಷೇಧಗೊಳಿಸುವ ಮೂಲಕ, ಅವುಗಳನ್ನು ದಟ್ಟಣೆ ಮುಕ್ತವಾಗಿ ಇರಿಸಬೇಕು. ಸಾರ್ವಜನಿಕ ಸಂಚಾರದಲ್ಲಿ ಮಾಡಿದ ಹೂಡಿಕೆಗಳು ಆರ್ಥಿಕವಾಗಿ ಸಾಧ್ಯನೀಯವಾಗಿರಬೇಕು ಹಾಗೂ ನ್ಯಾಯಯುತವಾಗಿ ಇರಬೇಕು.
- ದುಬಾರಿ ಯೋಜನೆಗಳಾದ ಬೆಂಗಳೂರು ಮೆಟ್ರೋ, ಅಧಿಕ ವೇಗದ ರೈಲು ಸಂಪರ್ಕ – ಎಚ್‌ಎಸ್‌ಆರ್‌ಎಲ್, ಮೋನೋರೈಲ್ ಹಾಗೂ ಎತ್ತರಿಸಿದ ರಸ್ತೆಗಳಂತಹ ಯೋಜನೆಗಳ ಬದಲು, ಬಿಆರ್‌ಟಿಯಂತಹ (ಬಸ್ ರ್‍ಯಾಪಿಡ್ ಟ್ರಾನ್ಸಿಟ್ ಬಿಆರ್‌ಟಿ) ಮುಂತಾದ ಕಡಿಮೆ ವೆಚ್ಚದ ಸುಲಭವಾಗಿ ಲಭ್ಯವಾಗುವ ಅಗ್ಗದ ಸಾರ್ವಜನಿಕ ಸಂಚಾರ ವ್ಯವಸ್ತೆಗಳಿಗೆ ಆದ್ಯತೆ ನೀಡಬೇಕು.
- ರಸ್ತೆಗಳು ಹಾಗೂ ಇತರ ಸಂಚಾರ ಮೂಲ ಸೌಕರ್ಯಗಳಲ್ಲಿ ವಿವೇಚನೆಯ ಬಳಕೆಯನ್ನು ಬಿಬಿಎಮ್‌ಪಿ ಮಾಡಬೇಕು. ಈ ನಿಟ್ಟಿನಲ್ಲಿ ಮುಂದುವರೆದರೆ ಪ್ರಯೋಜನವಲ್ಲದ ಹಾಗೂ ಜನವಿರೋದಿಯಾದ ಯೋಜನೆಗಳಾದ ರಸ್ತೆ ಅಗಲೀಕರಣ, ಫ್ಲೈಓವರ್‌ಗಳು, ಅಂಡರ್‌ಪಾಸ್‌ಗಳು, ಇತ್ಯಾದಿಗಳಲ್ಲಿ ಹಣ ಹೂಡುವುದನ್ನು ತಪ್ಪಿಸುವುದಾಗಿದೆ.
- ಟ್ರಾಫಿಕ್ ದಟ್ಟಣೆಯನ್ನು ತಗ್ಗಿಸುವ ಕ್ರಮಗಳನ್ನು ಜಾರಿಗೊಳಿಸಲು, ರಸ್ತೆಗಳನ್ನು ಸುರಕ್ಷಿತವಾಗಿ ಮಾಡಲು, ವಾರ್ಡ್





ಸಮಿತಿಗಳು ಮುಂದಾಗಬೇಕು.

# ಸಂಸ್ಕೃತಿ

- ಬೆಂಗಳೂರಿನಲ್ಲಿ ಕಲೆ ಹಾಗೂ ಸಾಂಸ್ಕೃತಿಕ ಆಚರಣೆಗಳನ್ನು ಬಿಬಿಎಮ್‌ಪಿ ಉತ್ತೇಜಿಸಲು ಮುಂದಾಗಬೇಕು.
- ಸಾಂಸ್ಕೃತಿಕ ಕಾರ್ಯಕ್ರಮಗಳು, ಕಲೆಯ ಯೋಜನೆಗಳು ಹಾಗೂ ಈ ರೀತಿಯ ಇತರ ಚಟುವಟಿಕೆಗಳಲ್ಲಿ ಜನಸಾಮಾನ್ಯರನ್ನು ಹಾಗೂ ವಾರ್ಡ್ ಸಮಿತಿಗಳನ್ನು ತೊಡಗಿಸಬೇಕು.
- ನಗರದಲ್ಲಿ ಕಲೆ ಹಾಗೂ ಸಾಂಸ್ಕೃತಿಕ ಉತ್ಸವಗಳನ್ನು ಆಯೋಜಿಸುವಲ್ಲಿ ಕಲಾವಿದರನ್ನು ತೊಡಗಿಸಿಕೊಳ್ಳಬೇಕು.
- ಸಾಂಸ್ಕೃತಿಕ ಸಮಾರಂಭಗಳನ್ನು ಉತ್ತೇಜಿಸಿ, ಆರ್ಥಿಕ ನೆರವು ನೀಡುವ ಸಲುವಾಗಿ ಹಾಗೂ ದೂರುಗಳನ್ನು ಬಗೆಹರಿಸಲು, ಬಿಬಿಎಮ್‌ಪಿಯು ಸ್ಥಾಯಿ ಸಮಿತಿಯನ್ನು ಸ್ಥಾಪಿಸಬೇಕು.
- ಸಾರ್ವಜನಿಕ ಕ್ಷೇತ್ರದ ಕಲೆ, ಸ್ಥಳೀಯ ಹಾಗೂ ಪ್ರಾದೇಶಿಕ ಸಾಂಸ್ಕೃತಿಕ ವೈವಿಧ್ಯತೆಯ ಪ್ರತಿನಿಧಿತ್ವವನ್ನು ಅಲಕ್ಷ್ಯ ಮಾಡಬಾರದು.
- ಸಾಂಸ್ಕೃತಿಕ ಮೂಲಭೂತವಾದ ವಿರುದ್ದ ಹೆಚ್ಚರ ವಹಿಸಿ ಕಲಾತ್ಮಕ ಸ್ವಾತಂತ್ರವನ್ನು ರಕ್ಷಿಸಬೇಕು.
- ಚಲನಚಿತ್ರ ಹಾಗೂ ಸಾಕ್ಷ್ಯಚಿತ್ರಗಳು, ಬೀದಿ ನಾಟಕಗಳು, ಇತ್ಯಾದಿ ಸಮುದಾಯದ ಆದಾರಿತ ಮಾಧ್ಯಮಗಳಿಗೆ ವಾರ್ಡ್ ಸಮಿತಿಗಳು ನೆರವು ನೀಡಬೇಕು.

# ಉದ್ಯಾನಗಳು ಹಾಗೂ ತೆರೆದ ಸ್ಥಳಗಳು

- ಉದ್ಯಾನಗಳು, ಆಟದ ಮೈದಾನಗಳು ಮುಂತಾದವು ಸಾರ್ವಜನಿಕ ಸ್ಥಳಗಳಾಗಿದ್ದು, ಇವುಗಳನ್ನು ಅತಿಕ್ರಮಣಗಳಿಂದ ರಕ್ಷಿಸಬೇಕು. ಹಾಗು ಎಲ್ಲ ಸಾರ್ವಜನಿಕ ಸ್ಥಳಗಳಿಗೂ ಪ್ರವೇಶ ಉಚಿತವಾಗಿ ದೊರೆಯಬೇಕು.
- ಬಿಬಿಎಮ್‌ಪಿ, ಸಣ್ಣ ಮಕ್ಕಳಿಗೆ ಮುಡಿಪಾದ ಆಟದ ಪಾರ್ಕುಗಳು ಹಾಗೂ ದೊಡ್ಡ ಮಕ್ಕಳಿಗೆ ಆಟದ ಮೈದಾನಗಳನ್ನು ಪ್ರತಿಯೊಂದು ವಾರ್ಡಿನಲ್ಲೂ ಸೃಷ್ಟಿಸಿ, ರಕ್ಷಿಸಬೇಕು.
- ಎಲ್ಲ ಉದ್ಯಾನಗಳು ಹಾಗೂ ಆಟದ ಮೈದಾನಗಳು ಸಂಪೂರ್ಣವಾಗಿ ಲಭ್ಯವಾಗಬೇಕು. ಅಂಗವಿಕಲ ಮಕ್ಕಳ ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು ಸಂವೇದನಾತ್ಮಕವಾದ ವಿನ್ಯಾಸವಿರುವ ಆಟದ ಸಾಮಗ್ರಿಗಳನ್ನು ಉಪಯೋಗಿಸಬೇಕು.
- ಉದ್ಯಾನಗಳು ಹಾಗೂ ತೆರೆದ ಸ್ಥಳಗಳನ್ನು ಒದಗಿಸಿ, ನಿರ್ವಹಣೆ ಮಾಡಿದಾಗ, ಅಲ್ಲಿ ಯಾವುದೇ ರೀತಿಯ ಬಿನ್ನ ಬೇದ ಮಾಡಬಾರದು.
- ಉದ್ಯಾನಗಳನ್ನು ಎಲ್ಲ ಬಳಕೆದಾರರಿಗೂ ಉಪಯುಕ್ತಗೊಳಿಸಬೇಕು, ಕೇವಲ ನಡಿಗೆದಾರರಿಗೆ ಮಾತ್ರವಲ್ಲ.
- ಎಚ್ಚರವಿರುವ ಎಲ್ಲ ವೇಳೆಯಲ್ಲೂ ಮಕ್ಕಳಿಗೆ ಉದ್ಯಾನಗಳ ಅನಿರ್ಬಂಧಿತ ಲಭ್ಯತೆ ಇರಬೇಕು ಹಾಗೂ ಅದರ ವಿನ್ಯಾಸವು, ತಡೆರಹಿತ ಹಾಗೂ ಮುಕ್ತ ಅವಕಾಶಕ್ಕೆ ಅವಕಾಶ ನೀಡಬೇಕು. ಮೂಲಭೂತ ಸೌಲಭ್ಯಗಳ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.
- ಉದ್ಯಾನಗಳು ಹಾಗೂ ತೆರೆದ ಸ್ಥಳಗಳ ನಿರ್ಮಾಣ ಹಾಗೂ ನಿರ್ವಹಣೆಗೆ ಸಂಬಂಧಿಸಿದ ನಿರ್ಣಯಗಳಲ್ಲಿ ವಾರ್ಡ್





ಸಮಿತಿಗಳು, ಪೋಷಕರು, ಮಕ್ಕಳು ಹಾಗೂ ಹಿರಿಯ ನಾಗರೀಕರನ್ನು ತೊಡಗಿಸಿಕೊಳ್ಳಬೇಕು.

- ಉದ್ಯಾನಗಳಿರುವ ಸ್ಥಳಗಳಲ್ಲಿ ಆಟದ ಮೈದಾನಗಳನ್ನು ಹಾಗೂ ಆಟದ ಮೈದಾನಗಳಿರುವ ಸ್ಥಳಗಳಲ್ಲಿ ಉದ್ಯಾನಗಳನ್ನು ಮಾಡಬಾರದು.
- ನೆರೆಹೊರೆಯ ಬಡಾವಣೆಗಳಿಂದ ಉದ್ಯಾನಗಳು ಹಾಗೂ ತೆರೆದ ಸ್ಥಳಗಳು ಸುರಕ್ಷಿತವಾದ ಕಾಲ್ನಡಿಗೆಯ ದೂರದಲ್ಲಿ ಇರಬೇಕು.
- ಲಾಲ್‌ಬಾಗ್, ಕಬ್ಬನ್ ಪಾರ್ಕ್, ಇತ್ಯಾದಿಯಾದ ಐತಿಹಾಸಿಕ ಉದ್ಯಾನಗಳು ಸಂಪೂರ್ಣವಾಗಿ ಹಾಗೂ ಮುಕ್ತವಾಗಿ ಲಭ್ಯವಾಗಬೇಕು ಹಾಗೂ ಪರಿಸರ ಹಾಗೂ ಸಾಂಸ್ಕೃತಿಕ ಶಿಕ್ಷಣದ ಸ್ಥಳಗಳಾಗಿ ರೂಪುಗೊಳ್ಳಬೇಕು.
- ಗುರುತಿನ ಚೀಟಿಗಳು ಅಥವಾ ಅದೇ ರೀತಿಯ ಹಿಂಚಲಿಸುವ ಹಾಗೂ ಅಸಂವೈಧಾನಿಕ ವಿಧಾನಗಳ ಮೂಲಕ ತೆರೆದ ಸ್ಥಳಗಳು ಹಾಗೂ ಉದ್ಯಾನಗಳಿಗೆ ಪ್ರವೇಶವನ್ನು ಸೀಮಿತಗೊಳಿಸುವ ಯಾವುದೇ ಯತ್ನ ಹಾಗೂ ಕಾರ್ಯವನ್ನು ಬಿಬಿಎಮ್‌ಪಿಯು ತಡೆಯಬೇಕು.
- ವರ್ಗ, ಜಾತಿ, ಕುಲ, ಮತ, ಲಿಂಗ, ಇತ್ಯಾದಿಗಳ ಆಧಾರದ ಮೇಲೆ, ಸಾರ್ವಜನಿಕ ಸ್ಥಳಗಳಿಗೆ ಹಾಗೂ ಉದ್ಯಾನಗಳ ಪ್ರವೇಶಕ್ಕೆ ಯಾವುದೇ ರೀತಿಯ ತಡೆಯನ್ನು ವಿಧಿಸಬಾರದು.

# ಪಾರಂಪರಿಕ ಸ್ಥಳಗಳು

- ನಗರದ ಪಾರಂಪರಿಕ ಸಂಪತ್ತನ್ನು ರಕ್ಷಿಸುವ ಸಮಗ್ರ ನೀತಿಯನ್ನು ಬಿಬಿಎಮ್‌ಪಿಯು ರೂಪಿಸಬೇಕು.
- ಪಾರಂಪರಿಕ ಸಂಪತ್ತಿನ ಸಂರಕ್ಷಣೆಗಾಗಿ, ಕಟ್ಟಡ ನಿರ್ಮಾಣಗಾರರು, ಕಲಾವಿದರು, ನಗರ ಯೋಜಕರು, ಸಮಾಜ ಶಾಸ್ತ್ರಜ್ಞರು, ಮಾನವ ಶಾಸ್ತ್ರಾಜ್ಞರು, ಪರಿಸರವಾದಿಗಳು, ಪರಿಸರಶಾಸ್ತ್ರಜ್ಞರು, ಪುರಾತತ್ವಶಾಸ್ತ್ರಜ್ಞರು, ಅರಣ್ಯ ತಜ್ಞರು, ಇತ್ಯಾದಿಗಳನ್ನು ಒಳಗೊಂಡ ಅಂತರ್ವೈಚಾರಿಕ ಸಮಿತಿಯ ನೆರವಿರುವ ಬಿಬಿಎಮ್‌ಪಿಯು ಸ್ಥಾಯಿ ಸಮಿತಿಯನ್ನು ರಚಿಸಬೇಕು.
- ಯುನೆಸ್ಕೋದ ಅಮೂರ್ತವಾದ ಪಾರಂಪರಿಕ ಸಂಪತ್ತಿನ ರಕ್ಷಣೆಯ ಸಮಾವೇಶದ ಘೋಷಣೆಗಳಿಗೆ ಅನುಗುಣವಾಗಿ, ಪುರಾತನ ನೆರೆಹೊರೆಗಳು, ಸಾಲುಮರದ ರಸ್ತೆಗಳು, ಹಳೆಯ ಮಾರುಕಟ್ಟೆಗಳು ಹಾಗೂ ಅದೇ ರೀತಿಯ ಸ್ಥಳಗಳನ್ನು ಜೀವಂತ ಪಾರಂಪರಿಕ ಸಂಪತ್ತುಗಳೆಂದು ಘೋಷಿಸಲು ಬಿಬಿಎಮ್‌ಪಿ ಕ್ರಮಗಳನ್ನು ಕೈಗೊಳ್ಳಬೇಕು.
- ಉಳಿದಿರುವ ಪಾರಂಪರಿಕ ಸಂಪತ್ತಿನ ರಕ್ಷಣೆ, ನೈಸರ್ಗಿಕ ಸಂಪತ್ತು, ಕುಶಲಕಲೆಯ ಕೌಶಲ್ಯಗಳು, ಭಾಷೆಗೆ ಸಂಬಂಧಿಸಿದ ಸಾಂಸ್ಕೃತಿಕ ಸಂಪತ್ತು, ಹಾಗೂ ಇತರ ಅಮೂರ್ತವಾದ ಸಾಂಸ್ಕೃತಿಕ ಸಂಪತ್ತಿನ ಜೊತೆಗೆ, ಸ್ಮಾರಕಗಳು ಹಾಗೂ ಸಂರಚನೆಗಳನ್ನೂ ರಕ್ಷಿಸುವತ್ತ ಪಾರಂಪರಿಕ ಸಂಪತ್ತಿನ ಸಂರಕ್ಷಣೆಗೆ ಗಮನ ಹರಿಸಬೇಕು.
- ಎಲ್ಲ ಪಾರಂಪರಿಕ ಸಂಪತ್ತಿನ ಸ್ಥಳಗಳನ್ನು ಸುಸಜ್ಜಿತವಾಗಿ ನಿರ್ವಹಿಸಿ, ಎಲ್ಲರಿಗೂ ಲಭ್ಯವಾಗುವಂತೆ ಮಾಡಬೇಕು.
- ಪಾರಂಪರಿಕ ಸಂಪತ್ತಿನ ಸಂರಕ್ಷಣೆಯಲ್ಲಿ ತೊಡಗುವಂತೆ ಶಾಲೆಗಳು ಹಾಗೂ ಕಾಲೇಜುಗಳನ್ನು ಬಿಬಿಎಮ್‌ಪಿ ಉತ್ತೇಜಿಸಬೇಕು.
- ತಮ್ಮ ಸುತ್ತಲಿರುವ ಪಾರಂಪರಿಕ ಸಂಪತ್ತನ್ನು ಕುರಿತು ಜನಸಾಮಾನ್ಯರಲ್ಲಿ ಅರಿವನ್ನು ಬೆಳೆಸಲು, ಅನುರೂಪವಾದ, ಗುರುತಿಸಲಾಗುವ ಫಲಕಗಳಿಂದ ಪಾರಂಪರಿಕ ಸಂಪತ್ತಿನ ವಲಯಗಳನ್ನು ಹೆಸರಿಸಬೇಕು.

- ವಿಡಿಯೋ ಚಿತ್ರಣ, ಬರವಣಿಗೆಗಳು, ಆಡಿಯೋ ಹಾಗೂ ಇತರ ಯಾವುದೇ ಮಾಧ್ಯಮಗಳ ಮೂಲಕ ಬೆಂಗಳೂರಿನ ಪಾರಂಪರಿಕ ಸಂಪತ್ತನ್ನು ದಾಖಲಿಸುವ ಯೋಜನೆಗಳನ್ನು ಉತ್ತೇಜಿಸಬೇಕು.
- ಸಾಂಸ್ಕೃತಿಕ ರಾಯಭಾರಿಗಳು ಹಾಗೂ ಪ್ರಾಯೋಜಕರ ಸಂಪರ್ಕಜಾಲವನ್ನು ಕಟ್ಟುವ ಮೂಲಕ, ಬಿಬಿಎಮ್‌ಪಿಯು ಸಕ್ರಿಯವಾಗಿ ಸಾಂಸ್ಕೃತಿಕ ಸಂಪತ್ತಿನ ಸಂರಕ್ಷಣೆಯನ್ನು ಮಾಡಬೇಕು.

# ನೈಸರ್ಗಿಕ ಸಂಪನ್ಮೂಲ ನಿರ್ವಹಣೆ

- ನಗರದ ಜೀವವೈವಿಧ್ಯ, ಹಸಿರುಹಾಸು, ಕೆರೆಗಳು, ಜಲಾನಯನಗಳು, ಇತ್ಯಾದಿಗಳ ಸಂರಕ್ಷಣೆಗೆ ನೆರವಾಗಲು, ಪರಿಸರ, ವೃಕ್ಷ ರಕ್ಷಣೆ, ನಗರ ಅರಣ್ಯ, ಜಲಾನಯನ ನಿರ್ವಹಣೆ ಹಾಗೂ ಜೀವವೈವಿಧ್ಯ ಸಂರಕ್ಷಣೆಯ ಸಲುವಾಗಿ ಸ್ಥಾಯಿ ಸಮಿತಿಗಳನ್ನು ಬಿಬಿಎಮ್‌ಪಿ ಸ್ಥಾಪಿಸಬೇಕು. ಈ ಸಮಿತಿಯ ಕಾರ್ಯನಿರ್ವಹಣೆಯಲ್ಲಿ, ನಗರದ ವಿವಿಧ ನೈಸರ್ಗಿಕ ಹಾಗೂ ಪಾರಿಸಾರಿಕ ವಿಷಯಗಳನ್ನು ಕುರಿತು ಸಾರ್ವಜನಿಕ ಅರಿವನ್ನು ಬೆಳೆಸುವ ಕಾರ್ಯದಲ್ಲಿ ಈ ಸಮಿತಿಯು ತೊಡಗಬೇಕು. ಭೂದೃಶ್ಯ ಪರಿಸರತಜ್ಞರು, ನಗರ ಅರಣ್ಯಕ್ಕೆ ಸಂಬಂಧಿಸಿದ ವೃತ್ತಿಪರರು, ಸರೋವರಶಾಸ್ತ್ರಜ್ಞರು, ಪರಿಸರವಾದಿಗಳು, ಇತ್ಯಾದಿಗಳ ಅಂತರವೈಚಾರಿಕ ಸಲಹೆಗಾರರ ಸಮಿತಿಯನ್ನು ಸ್ಥಾಪಿಸುವ ಮೂಲಕ, ಸಮಿತಿಯು ತನ್ನ ಕಾರ್ಯನಿರ್ವಹಣೆಯನ್ನು ಮಾಡಲು ನೆರವಾಗಬಹುದು.

**ಮರಗಳು ಹಾಗೂ ನಗರ ಅರಣ್ಯ:**

- ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ, ೧೯೭೬ಕ್ಕೆ ಬದ್ಧವಾಗಿ, ತನ್ನ ಸರಹದ್ದಿನಲ್ಲಿ ಇರುವ ಎಲ್ಲ ಮರಗಳ ಮಾಹಿತಿ ಕೋಷವನ್ನು ಅರಣ್ಯ ಇಲಾಖೆಯೊಡನೆ ಸೇರಿ ಬಿಬಿಎಮ್‌ಪಿ ಕಾರ್ಯನಿರ್ವಹಿಸಬೇಕು.
- ಹಳೆಯ ಸಾಲುಮರಗಳ ರಸ್ತೆಗಳು, ಮರಗಳು ಹಾಗೂ ಉದ್ಯಾನಗಳ ಸಾಲಿರುವ ಹೆಬ್ಬೀದಿಗಳು, ಗುಂಡುತೋಪುಗಳು ಹಾಗೂ ದೇವರಕಾಡುಗಳನ್ನು ಪಾರಂಪರಿಕ ಸಂಪತ್ತಿನ ವಲಯಗಳಾಗಿ ಘೋಷಿಸಿ, ಪಕ್ಷಿಗಳು ಹಾಗೂ ಇತರ ವೃಕ್ಷ ನಿವಾಸಿ ಪ್ರಾಣಿಗಳಿಗೆ ಅರಣ್ಯಜೀವಿಗಳ ಹೊರದಾರಿಗಳಾಗಿ ರಕ್ಷಿಸಬೇಕು.
- ತಣ್ಣನೆಯ ಕಿರು-ಹವಾಮಾನ ವಲಯಗಳನ್ನು ಸೃಷ್ಟಿಸಲು ಹಾಗೂ ಶಬ್ದ ಹಾಗೂ ವಾಯುಮಾಲಿನ್ಯವನ್ನು ನಿಯಂತ್ರಿಸುವ ಮಾರ್ಗವಾಗಿ, ಮರಗಳನ್ನು ನೆಡುವುದು ಹಾಗೂ ಹಸಿರು ಮೇಲ್ಛಾವಣಿಗಳನ್ನು ಸೃಷ್ಟಿಸುವುದನ್ನು ಸಕ್ರಿಯವಾಗಿ ಉತ್ತೇಜಿಸಬೇಕು.
- ಮರಗಳ ನೆರಳಿನಲ್ಲಿ ಇರುವ ಪ್ರದೇಶಗಳು ಕಟ್ಟಡದ ಶಕ್ತಿಯ ಸಂರಕ್ಷಣೆಯನ್ನು ಮಾಡುವಲ್ಲಿನ ಉಪಯುಕ್ತತೆಯನ್ನು ಒತ್ತಿ ಹೇಳಬೇಕು, ಹಾಗೂ ಸಾರ್ವಜನಿಕ ಹಾಗೂ ಖಾಸಗಿ ಪ್ರದೇಶಗಳಲ್ಲಿ ಮರಗಳನ್ನು ಕಡಿಯುವುದನ್ನು ವಿರೋಧಿಸಬೇಕು.
- ಎಲ್ಲ ನೆರೆಹೊರೆಗಳಲ್ಲೂ ಸ್ಥಳೀಯ ವೃಕ್ಷ ತಳಿಗಳ ಬೆಳೆಸುದು ಹಾಗೂ ರಕ್ಷಣೆಯನ್ನು ಉತ್ತೇಜಿಸುವ ಸಲುವಾಗಿ, ವೃಕ್ಷ ಪಟ್ಟಾ ಯೋಜನೆಗಳನ್ನು (ಪಟ್ಟಾ ಇರುವವರಿಗೆ, ಆ ಮರದ ಉತ್ಪನ್ನಗಳನ್ನು ಬಳಕೆ ಮಾಡುವ ಸೌಲಭ್ಯ) ಪರಿಚಯಿಸಬೇಕು.

- ನಡಿಗೆ ಹಾಗೂ ಸೈಕಲ್ ಬಳಕೆಯಂತಹ ಆರೋಗ್ಯಕರ ಆಚರಣೆಗಳನ್ನು ಹಾಗೂ ಇಂಗಾಲದ ತಟಸ್ಥತೆಯನ್ನು ಉತ್ತೇಜಿಸಲು, ಹಾಗೂ ರಸ್ತೆ ವ್ಯಾಪಾರಿಗಳಿಗೆ ನೆರಳನ್ನು ಒದಗಿಸಲು, ಎಲ್ಲ ರಸ್ತೆಗಳಲ್ಲೂ ಮರಗಳ ನೆರಳು ಇರುವಂತೆ ಮಾಡಬೇಕು.
- ಬೆಂಗಳೂರಿನ ಕಳೆದು ಹೋದ ಹಸಿರುಹಾಸನ್ನು ಮತ್ತೆ ಪಡೆಯಲು, ಸ್ಥಳೀಯವಾದ ಹಾಗೂ ಸ್ಥಳೀಯವಾಗಿ ಉಪಯುಕ್ತವಾಗುವ ಮರಗಳ ಬೃಹತ್ ಪ್ರಮಾಣದ ನೆಡುತೋಪುಗಳನ್ನು ನೆಡುವ ಕ್ರಮಗಳನ್ನು ಕೈಗೊಳ್ಳಬೇಕು. ಮುಂದಿನ ಐದು ವರ್ಷಗಳಲ್ಲಿ ಒಂದು ಕೋಟಿ ಮರಗಳನ್ನು ನೆಡುವ ಗುರಿಯನ್ನು ಹೊಂದಿರಬೇಕು.

**ಕೆರೆಗಳು:**

- ಕೆರೆಗಳು ಹಾಗೂ ಕೆರೆ ವ್ಯವಸ್ಥೆಗಳ ರಕ್ಷಣೆ, ಪುನಃಸ್ಥಾಪನೆ ಹಾಗೂ ನಿರ್ವಹಣೆಗಾಗಿ, ಸಾಮಾಜಿಕ ಹಾಗೂ ಪಾರಿಸಾರಿಕವಾದ ಸಂವೇದನಾತ್ಮಕ ವಿಧಾನಗಳಿಗೆ ಬಿಬಿಎಮ್‌ಪಿಯು ನೆರವು ನೀಡಬೇಕು.
- ಕೆರೆಗಳ ನಿರ್ವಹಣೆ ಹಾಗೂ ಸಂರಕ್ಷಣೆಗೆ ಸಂಬಂಧಿಸಿದಂತೆ, ವಾರ್ಡ್ ಸಮಿತಿಗಳು ಹಾಗೂ ಸ್ಥಳೀಯ ಸಮುದಾಯಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು.
- ಕೆರೆಗಳ ಪುನರುಜ್ಜೀವನ ಅಥವಾ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ನಿರ್ಣಯಗಳನ್ನು, ಸಾರ್ವಜನಿಕ ಸಮಾಲೋಚನೆಗಳ ಮೂಲಕ, ಅದರಲ್ಲೂ ಜಲಾಗರಗಳ ಮೇಲೆ ಅವಲಂಬಿತರಾದವರೊಂದಿಗೆ ಸಮಾಲೋಚನೆಗಳ ನಂತರವೇ ಕೈಗೊಳ್ಳಬೇಕು.
- ಬಿಬಿಎಮ್‌ಪಿ ಸರಹದ್ದಿನಲ್ಲಿ ಇರುವ ಎಲ್ಲ ಕೆರೆಗಳನ್ನು ಸಾರ್ವಜನಿಕ ಸ್ಥಳಗಳಾಗಿ ಹಾಗೂ ಪಾರಿಸರ ಸ್ಥಳಗಳಾಗಿ ಲಭ್ಯವಾಗುವ ರೀತಿಯಲ್ಲಿ ರಕ್ಷಣೆ ಹಾಗೂ ನಿರ್ವಹಣೆಯನ್ನು ಮಾಡಬೇಕು ಹಾಗೂ, ಯಾವುದೇ ರೀತಿಯ ಖಾಸಗೀಕರಣದ ಉತ್ತೇಜನವಾಗಲಿ ಅಥವಾ ಅನುಮತಿಯನ್ನಾಗಲಿ ನೀಡಬಾರದು.
- ತನ್ನ ಸರಹದ್ದಿನಲ್ಲಿ ಬರುವ ಎಲ್ಲ ಕೆರೆಗಳನ್ನೂ ಸಂರಕ್ಷಿತ ಕಾಡುಗಳಾಗಿ ಘೋಷಿಸುವ ಮೂಲಕ, ಅವುಗಳಿಗೆ ಮಾಲಿನ್ಯ, ಅತಿಕ್ರಮಣ ಮತ್ತು ವಿನಾಶದಿಂದ ರಕ್ಷಣೆಯನ್ನು ನೀಡಬೇಕೆಂದು ಸರ್ಕಾರಕ್ಕೆ ಬಿಬಿಎಮ್‌ಪಿ ಶಿಫಾರಸ್ಸು ಮಾಡಬೇಕು.
- ಸೂಕ್ತವಾದ ಗಿಡಗಂಟೆಗಳು, ಮರಗಳ ಹಾಸು ಹಾಗೂ ಜಲ ಮಾಲಿನ್ಯವನ್ನು ನಿಭಾಯಿಸುವ ವಿಧಾನಗಳ ಮೂಲಕ, ಎಲ್ಲ ರಾಜ ಕಾಲುವೆಗಳನ್ನೂ ಜಲ ಸಂರಕ್ಷಣಾ ವಲಯಗಳಾಗಿ ಪುನರ್ವಸತಿಗೊಳಿಸಬೇಕು.
- ನಗರದ ಬಡಜನರ ಮನೆಯ ಹಕ್ಕನ್ನು ಉಲ್ಲಂಘಿಸದ ರೀತಿಯಲ್ಲಿ, ತಪ್ಪದೆ, ಮಾನವೀಯ ದೃಷ್ಟಿಕೋನದಿಂದ ಅತಿಕ್ರಮಣಗಳನ್ನು ನಿಭಾಯಿಸಬೇಕು.
- ಬೆಂಗಳೂರು ನಗರದ ಅರೆ–ನಗರ ಪ್ರದೇಶಗಳಲ್ಲಿ ಇನ್ನೂ ಅಸ್ತಿತ್ವದಲ್ಲಿರುವ ತೇವಯುಕ್ತ ಭೂಮಿಗಳಿಗೆ, ಭೂಮಾಲೀಕರಿಗೆ, ಕೃಷಿ, ತೋಟಗಾರಿಕೆ, ಮರಗಳ ಕೃಷಿ, ಇತ್ಯಾದಿಯಲ್ಲಿ ತೊಡಗಲು ಪ್ರೋತ್ಸಾಹಕಗಳನ್ನು ನೀಡಬೇಕು.

**ಅರಣ್ಯಗಳು:**

- ಅತಿಕ್ರಮಣ, ತ್ಯಾಜ್ಯ ಗುಡ್ಡೆಗಳು ಹಾಗೂ ಇತರ ವಿನಾಶಕಾರಿ ಚಟುವಟಿಕೆಗಳಿಂದ ನಗರದ ಅರಣ್ಯಗಳನ್ನು ರಕ್ಷಿಸಲು, ಬಿಬಿಎಮ್‌ಪಿ ಸಂಘಟನಾತ್ಮಕ ಪಾತ್ರವನ್ನು ವಹಿಸಬೇಕು.





- ಜೀವವೈವಿಧ್ಯದಿಂದ ಸಿರಿವಂತವಾದ ಪ್ರದೇಶಗಳನ್ನು ರಕ್ಷಿಸಲು ಹಾಗೂ ಪಾರಿಸಾರಿಕ ಶಿಕ್ಷಣ ಹಾಗೂ ನೈಸರ್ಗಿಕ ಜಗತ್ತನ್ನು ಕುರಿತು ಮೆಚ್ಚುಗೆಯನ್ನು ಬೆಳೆಸಿಕೊಳ್ಳುವ ಸಲುವಾಗಿ, ಈ ಅರಣ್ಯಗಳ ರಕ್ಷಣೆಯನ್ನು ಹಾಗೂ ಸಂರಕ್ಷಣೆಯನ್ನು ಮಾಡಲು ವಾರ್ಡ್ ಸಮಿತಿಗಳ ಚಟುವಟಿಕೆಗಳನ್ನು ಉತ್ತೇಜಿಸಲು, ಬಿಬಿಎಮ್‌ಪಿ ಅರಣ್ಯ ಇಲಾಖೆಗೆ ನೆರವಾಗಬೇಕು.
- ನಗರ ಪ್ರದೇಶಗಳಲ್ಲಿ ಇರುವ ಅರಣ್ಯ ಜೀವಿಗಳ ಹೊರದಾರಿಗಳನ್ನು ನಗರೀಕರಣ, ಅತಿಕ್ರಮಣ ಹಾಗೂ ಎಲ್ಲ ರೀತಿಯ ಮಾಲಿನ್ಯದಿಂದ ರಕ್ಷಿಸಬೇಕು.
- ಪಠ್ಯಕ್ರಮದ ಭಾಗವಾಗಿ ಹಾಗೂ ಪರಿಸರ ಸಂರಕ್ಷಣೆಯನ್ನು ಆದ್ಯ ಕರ್ತವ್ಯವಾಗಿ ರೂಡಿಸಿಕೊಳ್ಳಲು, ಶಾಲೆಗಳು ಹಾಗೂ ಕಾಲೇಜುಗಳನ್ನು ನಗರ ಅರಣ್ಯಗಳ ರಕ್ಷಣೆ ಹಾಗೂ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.
- ಶಿಥಿಲೀಕರಣಗೊಂಡ ಹಾಗೂ ಅತಿಕ್ರಮಣಗೊಂಡ ಅರಣ್ಯ ಭೂಮಿಗಳನ್ನು ಹಿಂಪಡೆದು, ಸ್ಥಳೀಯ ತಳಿಗಳ ಮರಗಳುಳ್ಳ ಉದ್ಯಾನಗಳಾಗಿ ಅಭಿವೃದ್ಧಿಪಡಿಸಬೇಕು.

# ಸಾರ್ವಜನಿಕ ಶಿಕ್ಷಣ

- ಬಿಬಿಎಮ್‌ಪಿ ಎಲ್ಲರಿಗೂ ಶಿಕ್ಷಣ ದೊರೆಯುವುದನ್ನು ಖಚಿತಪಡಿಸಿಕೊಳ್ಳಬೇಕು.
- ಬಿಬಿಎಮ್‌ಪಿ ಶಿಕ್ಷಣದ ಗುಣಮಟ್ಟ, ಸುರಕ್ಷಿತವಾದ ಮೂಲ ಸೌಕರ್ಯಗಳು (ಅಗ್ನಿಶಾಮಕ ಸಾಧನವನ್ನೊಳಗೊಂಡು), ಆಟ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಥಳ, ಮಕ್ಕಳಿಗೆ ಪೌಷ್ಟಿಕತೆ ಒದಗಿಸುವಿಕೆ ಮತ್ತು ಸಂಪೂರ್ಣ ಶಿಕ್ಷಣಕ್ಕೆ ಆದ್ಯತೆ, ಇವುಗಳನ್ನು ಪರಿಶೀಲಿಸಲು ಸ್ಥಾಯಿ ಸಮಿತಿಯನ್ನು ರಚಿಸುವುದು.
- ಅಂಗನವಾಡಿ ಮತ್ತು ಐಸಿಡಿಎಸ್ ಕೇಂದ್ರಗಳ ವ್ಯಾಪಕ ಜಾಲವನ್ನು ಒದಗಿಸುವುದು, ಮತ್ತು ಎಲ್ಲಾ ಪ್ರಾಂತ್ಯಗಳ ಸಮೀಪದಲ್ಲಿ ಶಾಲೆ ಮತ್ತು ಕೆಲಸದ ಸ್ಥಳವನ್ನು ಒದಗಿಸುವುದು.
- ಮಕ್ಕಳ ಅವರವರ ಸಾಂಸ್ಕೃತಿಕ ಹಿನ್ನೆಲೆಯ ಆದಾರದಲ್ಲಿ ಮದ್ಯಾಹ್ನ ಊಟದ ಯೋಜನೆಯನ್ನು ಒದಗಿಸುವುದು. ಅಗತ್ಯವಿರುವ ಮಕ್ಕಳಿಗೆ ಶಾಲೆಯ ರಜಾ ದಿನಗಳಲ್ಲೂ ಮದ್ಯಾಹ್ನದ ಊಟವನ್ನು ಒದಗಿಸುವ ಕಾರ್ಯಕ್ರಮವನ್ನು ಪ್ರಾರಂಭಿಸುವುದು.
- ಬಿಬಿಎಮ್‌ಪಿಯು ತನ್ನ ವ್ಯಾಪ್ತಿಗೆ ಬರುವ ಯಾವುದೇ ಶಾಲೆಗಳನ್ನು ಮುಚ್ಚಬಾರದು ಮತ್ತು ಶೈಕ್ಷಣಿಕ ಸೌಲಭ್ಯಗಳ ಖಾಸಗೀಕರಣವನ್ನು ಮಾಡಬಾರದು.
- ಬಿಬಿಎಮ್‌ಪಿಯು ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರಕಾರೀ ಶಾಲೆಗಳ ನಿರ್ವಹಣೆಯನ್ನು ಕೈಗೆತ್ತಿಕೊಳ್ಳುವ ನಿಟ್ಟಿನಲ್ಲಿ  ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು.
- ಬಿಬಿಎಮ್‌ಪಿ ವಿದ್ಯಾರ್ಥಿಗಳಿಗಾಗಿ ನಡೆಸುವ ಹಾಸ್ಟೆಲ್‌ನಲ್ಲಿನ ವಸತಿ ಸೌಲಭ್ಯಗಳಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು, ಅದರಲ್ಲೂ ವಿಶೇಷವಾಗಿ ಹುಡುಗಿಯರ ಸುರಕ್ಷತೆಯನ್ನು ದೃಡಪಡಿಸಿಕೊಳ್ಳಬೇಕು.

# ಸಾಮಾಜಿಕ ನ್ಯಾಯ ಮತ್ತು ಜೀವನಾದಾರ

- ಸ್ವಯಂ ಉದ್ಯೋಗ, ಹಾಗು ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷತೆ, ನಿರಾಶ್ರಿತರಿಗೆ ಸಾಮಾಜಿಕ ನೆರವು,





ಕೆಲಸ ಮತ್ತು ವೃತ್ತಿ ಆದಾರಿತ ಹಕ್ಕುಗಳ ರಕ್ಷಣೆಯನ್ನು ಮಾಡಲು ಒಂದು ಸ್ಥಾಯಿ ಸಮಿತಿಯನ್ನು ರಚಿಸುವುದು.

- ಬಿಬಿಎಮ್‌ಪಿಯು ಎಲ್ಲರಿಗು ಸಮಾನವಾಗಿ ಉದ್ಯೋಗ ನೀಡಬೇಕುಇದರಲ್ಲಿ ಮಹಿಳೆಯರು, ಅಂಗವಿಕಲರು(೩%), ಅಂತರಲಿಂಗಿಯರು, ಅಲ್ಪಸಂಖ್ಯಾತರು ಇತ್ಯಾದಿಗಳ ಪ್ರತಿನಿಧಿತ್ವವನ್ನು ಖಚಿತಪಡಿಸಿಕೊಳ್ಳಬೇಕು.
- ಬಿಬಿಎಮ್‌ಪಿಯು ತನ್ನ ಎಲ್ಲಾ ಯೋಜನೆಗಳು ಮತ್ತು ವ್ಯವಸ್ಥೆಗಳಲ್ಲಿ ಸಂಪೂರ್ಣ ಕಾರ್ಮಿಕ ಮತ್ತು ಉದ್ಯೋಗ ಸುರಕ್ಷತಾ ಕಾನೂನು ಮತ್ತು ಉಲ್ಲಂಘಿಸುವವರಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳ ಬೇಕು.
- ಬೀದಿ ವ್ಯಾಪರಿಗಳ ರಾಷ್ಟ್ರೀಯ ನೀತಿಯನ್ನು ಬಿಬಿಎಮ್‌ಪಿ ಮಾರ್ಗದರ್ಶಿಯಾಗಿ ಬಳಸಬೇಕು. ಜೊತೆಗೆ ತನ್ನ ಎಲ್ಲಾ ಯೋಜನೆಗಳು ಮತ್ತು ವ್ಯವಸ್ಥೆಗಳಲ್ಲಿ, ಬೀದಿಗಳಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಬಡವರಿಗೆ ಬದುಕುವ ಆದಾರಕ್ಕಾಗಿ ಸ್ಥಳ ಒದಗಿಸುವುದರಲ್ಲಿ ಯಾವುದೇ ರಾಜಿ ಮಾಡಿಕೊಳ್ಳ ಬಾರದು.
- ಎಲ್ಲರಿಗೂ ದೊರಕುವ ಮತ್ತು ಸಂಪೂರ್ಣ ಶಿಶು ರಕ್ಷಣೆ ಸಿಗುವ ಶಿಶುಕೇಂದ್ರಗಳು ಹಗಲು ಮತ್ತು ರಾತ್ರಿ ಲಭ್ಯವಿರುವುದನ್ನು ಬಿಬಿಎಮ್‌ಪಿ ಖಚಿತಪಡಿಸ ಬೇಕು.
- ಬಿಬಿಎಮ್‌ಪಿ ನಗರದ ನಿರುದ್ಯೋಗಿಗಳಿಗೆ ಮತ್ತು ಕೆಳ ಉದ್ಯೋಗದಲ್ಲಿರುವವರಿಗೆ ಲಾಭದಾಯಕ ಉದ್ಯೋಗವನ್ನು ಒದಗಿಸಲು ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯನ್ನು (ಎಸ್‌ಜೆಎಸ್‌ಆರ್‌ವೈ) ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕು. ಎಸ್‌ಜೆಎಸ್‌ಆರ್‌ವೈನ ಸಿಬ್ಬಂದಿಯನ್ನು ಪ್ರತಿಯೊಂದು ವಾರ್ಡ್‌ನಲ್ಲೂ ಇರಿಸಬೇಕು ಮತ್ತು ಬಜೆಟ್‌ನಲ್ಲಿ ನೀಡಿರುವ ಹಣಕಾಸನ್ನು ಉದ್ಯೋಗ ಸೃಷ್ಟಿಗಾಗಿ ಬಳಸಬೇಕು ಮತ್ತು ಅದು ಖರ್ಚಾಗುವುದನ್ನು ಖಾತ್ರಿಪಡಿಸಬೇಕು.
- ಸಮಾನ ಕೆಲಸಕ್ಕಾಗಿ ಸಮಾನ ವೇತನದ ಕಾನೂನನ್ನು ಉಲ್ಲಂಘಿಸಿದವರ ಬಗ್ಗೆ ಕಟ್ಟು ನಿಟ್ಟಿನ ಕ್ರಮಕ್ಕೆ ಮುಂದಾಗ ಬೇಕು.
- ಎಲ್ಲಾ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರಗಳನ್ನು ಕಾಲಕಾಲಕ್ಕೆ ಆಯೋಜಿಸಲು ಮುಂದಾಗಬೇಕು.

# ಅಸಂಘಟಿತ ಕಾರ್ಮಿಕರ ರಕ್ಷಣೆ

- ಕಾರ್ಮಿಕರ ಶೋಷಣೆಯನ್ನು ತಡೆಯುವತ್ತ  ಮೊದಲನೆ ಹೆಜ್ಜೆಯಾಗಿ ಬಿಬಿಎಮ್‌ಪಿ ತನ್ನ ಕೆಲಸಗಳಲ್ಲಿ ಗುತ್ತಿಗೆ ಕಾರ್ಮಿಕರ ನಿಯೋಜನೆಯನ್ನು ನಿಷೇಧಿಸುವುದು.
- ಗುತ್ತಿಗೆ ಕಾರ್ಮಿಕರನ್ನು ಒಳಗೊಂಡಿರುವ ನಿರ್ಮಾಣ ಕೆಲಸ, ಕೈಗಾರಿಕೆಗಳು, ಮತ್ತು ಇತರ ಖಾಸಗೀ ಉದ್ದಿಮೆಗಳಂತಹ ಯಾವುದೇ ಕೆಲಸದಲ್ಲಿ ಗುತ್ತಿಗೆ ಕಾರ್ಮಿಕರ ಕಾಯ್ದೆಯ ಕಡ್ಡಾಯ ಅನುಷ್ಟಾನವನ್ನು ಬಿಬಿಎಮ್‌ಪಿ ಖಾತರಿಪಡಿಸಿಕೊಳ್ಳ ಬೇಕು.
- ಬಿಬಿಎಮ್‌ಪಿ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರಿಗಾಗಿ ವಿಶೇಷ ಕ್ಷೇಮಾಭಿವೃದ್ಧಿ ಯೋಜನೆ ಮತ್ತು ನಿಯಮಗಳನ್ನು ಮಾಡುವುದು ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ರಕ್ಷಣಾ ಕಾಯ್ದೆ, ೨೦೦೮ರಡಿಯಲ್ಲಿರುವ ವಿವಿಧ ಯೋಜನೆಗಳ ಬಗ್ಗೆ ಅವರಲ್ಲಿ ಅರಿವು ಮೂಡಿಸುವುದು.
- ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ಅಸಂಘಟಿತ ವಲಯದ ಕಾರ್ಮಿಕರು ೧೮% ಬಜೆಟ್‌ನ ಅಡಿಯಲ್ಲಿರುವ ಹಲವಾರು ಯೋಜನೆಗಳ ಫಲಾನುಭವಿಗಳಾಗುವುದನ್ನು ದೃಡಪಡಿಸಿಕೊಳ್ಳುವ ಅಭ್ಯಾಸ ಮತ್ತು ಜಾಗೃತಿಯನ್ನು ಬಿಬಿಎಮ್‌ಪಿ ಮಾಡುವುದು.

- ಬಿಬಿಎಮ್‌ಪಿ ಯಾವುದೇ ನಿರ್ಮಾಣ ಯೋಜನೆಗೆ ಅನುಮತಿಯನ್ನು ನೀಡುವಾಗ ಅರ್ಜಿದಾರನು ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯ್ದೆ, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಾಯ್ದೆ, ಕನಿಷ್ಠ ವೇತನ ಕಾಯ್ದೆ, ಸಮಾನ ವೇತನ ಕಾಯ್ದೆ ಮತ್ತು ಗುತ್ತಿಗೆ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯನ್ನು ಅನುಸರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು. ಜೊತೆಗೆ, ಅನುಮತಿಯು ಮನೆಗಳ ಗುಣಮಟ್ಟ, ಶೌಚಾಲಯ, ನೀರು ಸರಬರಾಜು, ವಿದ್ಯುಚ್ಛಕ್ತಿ, ಶಿಶುಗೃಹ ಇತ್ಯಾದಿಯ ಬಗ್ಗೆ ವಿವರಣೆಯನ್ನೊಳಗೊಂಡ 'ನಿರ್ಮಾಣ ಕಾರ್ಮಿಕರ ವಸತಿ ಗೃಹ ಮತ್ತು ಜೀವನ ಸ್ಥಿತಿಯ ಯೋಜನೆ'ಯ ಆದ್ಯತೆಯನ್ನು ಆಧರಿಸಿರಬೇಕು.

# ಹಿರಿಯರ ಕ್ಷೇಮಾಭಿವೃದ್ಧಿ

- ಬಿಬಿಎಮ್‌ಪಿಯು ಹಿರಿಯರಿಗೆ ಹಗಲು ಆರೈಕೆ ಕೇಂದ್ರಗಳನ್ನು ಸ್ಥಾಪಿಸಿ, ಅಲ್ಲಿ ಬಹುಮುಖ ಸೇವೆಗಳಾದ ಮನರಂಜನೆ, ದೈಹಿಕ ವ್ಯಾಯಾಮ, ಸಮಗ್ರ ಸಹಾಯಕ ತಂತ್ರಜ್ಞಾನಗಳು ಸಂಪೂರ್ಣವಾಗಿ ದೊರಕುವಂತಿರಬೇಕು.
- ಹಿರಿಯರಿಗೆ ಕೇಂದ್ರೀಕೃತ ಆರೋಗ್ಯ ಶುಶ್ರೂಷೆಯು ಎಲ್ಲಾ ಸಾರ್ವಜನಿಕ ಆರೋಗ್ಯ ಸೇವಾ ವ್ಯವಸ್ಥೆಗಳಲ್ಲಿನ ಭಾಗವಾಗಿರಬೇಕು.
- ಬಿಬಿಎಮ್‌ಪಿಯ ವ್ಯಾಪ್ತಿಯೊಳಗೆ ಹಿರಿಯರಿಗೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ಉಚಿತವಾಗಿ ಲಭ್ಯವಾಗುವಂತೆ ಮಾಡಬೇಕು.
- ಪೌಷ್ಟಿಕ ಆಹಾರ ಕಾರ್ಯಕ್ರಮದ ವಿಕೇಂದ್ರಿಕೃತ ಮತ್ತು ಸಮಗ್ರ ಹಂಚಿಕೆ ಬಡ ಕುಟುಂಬದಲ್ಲಿನ ಹಿರಿಯರಿಗೆ ದೊರೆಯುವುದನ್ನು ಬಿಬಿಎಮ್‌ಪಿ ಖಚಿತಪಡಿಸಿಕೊಳ್ಳಬೇಕು.
- ಬಿಬಿಎಮ್‌ಪಿ ಅವಶ್ಯಕತೆ ಇರುವ ಹಿರಿಯರಿಗೆ ಪಿಂಚಣಿ ಯೋಜನೆಯನ್ನು ಪರಿಚಯಿಸಬೇಕು.

# ಬಾಲ ಕಾರ್ಮಿಕತೆ

- ಬೆಂಗಳೂರಿನಲ್ಲಿ ಬಾಲ ಕಾರ್ಮಿಕ ಸಮಸ್ಯೆಯ ಬಗ್ಗೆ ಗಮನ ಹರಿಸಲು ಬಿಬಿಎಮ್‌ಪಿ ತಕ್ಷಣವೇ ಸಮಗ್ರ, ಕೆಳಮೇಲಾದ, ವಿಕೇಂದ್ರಿತ ಮತ್ತು ಭಾಗಿತ್ವದ ಮಾರ್ಗವನ್ನು ಬಿಬಿಎಮ್‌ಪಿ ತಕ್ಷಣವೇ ಅನುಷ್ಠಾನಗೊಳಿಸಬೇಕು.
- ಬಿಬಿಎಮ್‌ಪಿಯು ಬಾಲ ಕಾರ್ಮಿಕತೆಯ ನಿರ್ವಹಣೆಗೆ ಸಾಧ್ಯನೀಯ ಮತ್ತು ಸಬಲೀಕರಣ ಕೌಶಲ್ಯವನ್ನು ಅಳವಡಿಸಿಕೊಳ್ಳಬೇಕು ಮತ್ತು ಅದರ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳು ಕಾರ್ಯನಿರತ ಮಕ್ಕಳಿಗೆ ಹಾನಿ ಮಾಡುವುದು ಅಥವಾ ದಂಡ ಹಾಕದೇ ಇರುವುದನ್ನು ದೃಡಪಡಿಸಿಕೊಳ್ಳಬೇಕು.
- ಬಾಲ ಕಾರ್ಮಿಕತೆಯ ಬಗ್ಗೆ ಪ್ರತಿಕ್ರಿಯಿಸುವ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅಭಿವೃದ್ಧಿ ಮತ್ತು ಅನುಷ್ಠಾನವು ಕಾರ್ಯನಿರತ ಮಕ್ಕಳೊಂದಿಗಿನ ಸಂವಾದವನ್ನು ಆಧರಿಸಿರಬೇಕು.
- ಬಿಬಿಎಮ್‌ಪಿಯ ಯೋಜನೆಗಳು ಮಕ್ಕಳು ಸ್ನೇಹಿಯಾಗಿರಬೇಕು ಮತ್ತು ಅದು ಬಾಲ ಕಾರ್ಮಿಕತೆಯನ್ನು ಉಂಟು ಮಾಡುವ ಸಣ್ಣ ಮತ್ತು ದೊಡ್ಡ ಪರಿಣಾಮಗಳನ್ನು ಆಧರಿಸಿರಬೇಕು.





# ಮಕ್ಕಳ ಹಕ್ಕುಗಳು

- ಮಕ್ಕಳ ಹಕ್ಕುಗಳ ಬಗೆಗಿನ ರೀತಿನೀತಿಗಳನ್ನು ಬಿಬಿಎಮ್‌ಪಿ ಅನುಷ್ಠಾನಗೊಳಿಸಬೇಕು.
- ಎಲ್ಲಾ ನಗರ ಯೋಜನೆಗಳು ಮಕ್ಕಳ ಸಂವಾದವನ್ನು ಆಧರಿಸಿರಬೇಕು. ಇದು ಪಂಚಾಯತಿಗಳಲ್ಲಿ ನಡೆಯುವ "ಬಾಲ ಗ್ರಾಮಸಭೆ"ಗಳ ರೀತಿಯಲ್ಲೇ ಇರಬೇಕು.
- ಮಕ್ಕಳಿಗೆ ಕಷ್ಟದ ಸಮಯದಲ್ಲಿ ಸಹಾಯ ಮಾಡಲು ಮತ್ತು ಅವರ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು ಪ್ರತಿಯೊಂದು ವಾರ್ಡ್‌ನಲ್ಲೂ ಒಂದು ಸಾಮಾಜಿಕ/ಸಮುದಾಯ ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಿಬಿಎಮ್‌ಪಿ ಪ್ರಾರಂಭಿಸುವುದು.
- ಮಕ್ಕಳ ಮೇಲೆ ನೇರವಾಗಿ ಅಥವ ಪರೋಕ್ಷವಾಗಿ ಪರಿಣಾಮ ಬೀರುವ ವಿಷಯಗಳನ್ನು ನಿಭಾಯಿಸಲು ಸಾಕಷ್ಟು ಸಂಪನ್ಮೂಲಗಳನ್ನು ಬಿಬಿಎಮ್‌ಪಿ ಹಂಚುವುದು.

# ನಗರದ ಬಡತನ

- ಬಿಬಿಎಮ್‌ಪಿಯು ತನ್ನ ವ್ಯಾಪ್ತಿಯಲ್ಲಿನ ಕೊಳಚೆ ಪ್ರದೇಶಗಳಲ್ಲಿನ ಎಲ್ಲಾ ನಿವಾಸಿಗಳಿಗೆ ಖಾಯಂ ಕ್ರಯ ಪತ್ರವನ್ನು ನೀಡಬೇಕು.
- ಕಾನೂನಿನ ಪ್ರಕಾರ ಪುನರ್ ವಸತಿಯನ್ನು ಕಲ್ಪಿಸದೆ ಯಾವುದೇ ಕೊಳಚೆ ಪ್ರದೇಶವನ್ನು ತೆರವುಗೊಳಿಸ ಬಾರದು.
- ನಗರದಲ್ಲಿನ ಯಾರೂ ವಸತಿ ರಹಿತರಿಲ್ಲ ಎಂಬುದನ್ನು ಖಚಿತ ಪಡಿಸಲು ಬಿಬಿಎಮ್‌ಪಿಯು ಸೂಕ್ತ ಕ್ರಮ ಕೈಗೊಳ್ಳ ಬೇಕು.
- ಬೀದಿ, ಬಾಲ ಕಾರ್ಮಿಕ ಮಕ್ಕಳು ಮತ್ತು ನಿರಾಶ್ರಿತ ಜನರಿಗೆ ವಸತಿ ಒದಗಿಸಲು ಹಗಲು ರಾತ್ರಿ ವಸತಿಯಗಳನ್ನು ಅಗತ್ಯಕ್ಕನುಸಾರ ಒದಗಿಸಬೇಕು.

# ಪ್ರಾಣಿಗಳ ಕ್ಷೇಮಾಭಿವೃದ್ಧಿ

- ಪ್ರಾಣಿಗಳ ಹಕ್ಕುಗಳು ಸಂಪೂರ್ಣವಾಗಿ ರಕ್ಷಣೆಯಾಗುವುದನ್ನು ಬಿಬಿಎಮ್‌ಪಿ ಖಚಿತಪಡಿಸಿಕೊಳ್ಳಬೇಕು.
- ವಾರ್ಡ್ ಸಮಿತಿಗಳ ಪಾಲ್ಗೊಳ್ಳುವಿಕೆಯ ಮೂಲಕ ಬೀದಿ ನಾಯಿ ನಿಯಂತ್ರಣಕ್ಕಾಗಿ ಪ್ರಾಣಿ ಸಂತಾನ ನಿಯಂತ್ರಣ ಕಾರ್ಯಕ್ರಮವನ್ನು ಬಲಪಡಿಸಬೇಕು.
- ತೊಂಡು ಪ್ರಾಣಿಗಳು ಮತ್ತು ಹೆಗ್ಗಣಗಳ ಸಂಖ್ಯೆಯು ಹೆಚ್ಚಾಗುವುದನ್ನು ತಡೆಗಟ್ಟಲು ಪ್ರಗತಿಪರ ತ್ಯಾಜ್ಯ ನಿರ್ವಹಣಾ ಪದ್ಧತಿ ಮತ್ತು ವಧಾಲಯಗಳ ಬಿಗಿ ನಿಯಂತ್ರಣವನ್ನು ಕೈಗೊಳ್ಳಬೇಕು.
- ತೊಂಡು ಪ್ರಾಣಿಗಳನ್ನು ಕರುಣಾಪೂರ್ವಕ ಹಿಡಿಯುವ ಪದ್ಧತಿಯನ್ನು ಪರಿಚಯಿಸಬೇಕು.
- ಬಿಬಿಎಮ್‌ಪಿಯು ಪ್ರಾಣಿ ಕ್ಷೇಮಾಭಿವೃದ್ಧಿ ಪರೀಕ್ಷಕರ ತಂಡವನ್ನು ಸಜ್ಜುಗೊಳಿಸಬೇಕು.





- ನೊಂದಾವಣೆಯನ್ನು ಕಡ್ಡಾಯ ಗೊಳಿಸುವುದರ ಮೂಲಕ ಸಾಕುಪ್ರಾಣಿಗಳ ಮಾರಾಟವನ್ನು ನಿಯಂತ್ರಿಸಬೇಕು.
- ಪ್ರಾಣಿಗಳಿಗೆ ವಸತಿ ಕಲ್ಪಿಸುವ ಮನೆಗಳ ಸ್ಥಿತಿಯು ಯುಕ್ತವಾದ ಗುಣಮಟ್ಟವನ್ನು ಹೊಂದಬೇಕು.
- ಬಿಬಿಎಮ್‌ಪಿಯು ಅರಣ್ಯ ಇಲಾಖೆ ಮತ್ತು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಜೊತೆ ಕಾರ್ಯನಿರ್ವಹಿಸಿ ವಿಚಿತ್ರ ಜಾತಿಯ ಆಮದು ಮತ್ತು ಮಾರಾಟದ ಮೇಲೆ ನಿಷೇಧ ಹೇರಬೇಕು.
- ಸಾಕುಪ್ರಾಣಿಗಳು ಮತ್ತು ಇತರ ಪ್ರಾಣಿಗಳಿಗಾಗಿ ಒಂದು ಚಿತಾಗಾರವನ್ನು ಪ್ರಾರಂಭಿಸಬೇಕು.

# ತುರ್ತು ಸಂದರ್ಭಗಳಲ್ಲಿ

- ಬಿಬಿಎಮ್‌ಪಿ ಎಲ್ಲಾ ನೈಸರ್ಗಿಕ ಇತರೆ ವಿಕೋಪಗಳ, ನಿವಾರಣೆ ಮತ್ತು ಪ್ರತಿಕ್ರಿಯಿಸಲು ವಿಪತ್ತು ನಿರ್ವಹಣಾ ಕೋಶವನ್ನು ಪ್ರಾರಂಭಿಸಬೇಕು.
- ವಾರ್ಡ್ ಸಮಿತಿಗಳ ಮೂಲಕ ವ್ಯವಸ್ಥಿತ ಮತ್ತು ಸಮಗ್ರ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಸಾಮಾನ್ಯ ಜನರನ್ನು ತುರ್ತು ಸಂದರ್ಭಗಳಿಗೆ ಸಜ್ಜುಗೊಳಿಸಬೇಕು.
- ಆದ್ಯತೆಯ ಮೇರೆಗೆ, ಬಿಬಿಎಮ್‌ಪಿ ಎಲ್ಲ ತಗ್ಗಿನ ಪ್ರದೇಶಗಳನ್ನೂ ನೆರೆ ಆವಳಿಯಿಂದ ಮುಕ್ತ ಗೊಳಿಸಬೇಕು.
- ವಿಪತ್ತು ಸಂಭವಿಸಿದಾಗ, ತಕ್ಷಣದ ಪ್ರತಿಕ್ರಿಯೆಗಳಿಗಾಗಿ ಮಾಹಿತಿಯನ್ನು ಒದಗಿಸಲು, ವಾರ್ಡುಕಛೇರಿಗಳಲ್ಲಿ ಅಗತ್ಯವಾದ ಮಾಹಿತಿಗಳನ್ನು ಕ್ರೂಡಿಕರಿಸಿರಬೇಕು.
- ಹಾನಿಕಾರಕ ಪ್ರಕ್ರಿಯೆಗಳು ಹಾಗೂ ಸ್ಫೋಟಕಗಳು ಆವಿಶೀಲ ಉತ್ಪನ್ನಗಳನ್ನು ತಯಾರಿಸುವ ಉದ್ಯಮಗಳನ್ನು ಜನದಟ್ಟಣೆಯಿರುವ ಕ್ಷೇತ್ರಗಳಿಂದ ವರ್ಗಾಯಿಸಬೇಕು.

# ತ್ಯಾಜ್ಯ ನಿರ್ವಹಣೆ

- ನಗರದ ಘನ ತ್ಯಾಜ್ಯ ನಿರ್ವಹಣೆಯು ಬಿಬಿಎಮ್‌ಪಿಯ ಹೊಣೆಗಾರಿಕೆಯಾಗಿದ್ದು, ಅದರ ಸಮಗ್ರ ನಿರ್ವಹಣೆ ಹಾಗೂ ಹೊಣೆಗಾರಿಕೆಯನ್ನು ಸ್ವತಃ ಬಿಬಿಎಮ್‌ಪಿ ಮಾತ್ರ ಮಾಡಬೇಕು.
- ಯಾವುದೇ ಹಂತದಲ್ಲೂ ಘನ ತ್ಯಾಜ್ಯ ನಿರ್ವಹಣೆಯನ್ನು ಖಾಸಗಿ ಗುತ್ತಿಗೆದಾರರಿಗೆ ನೀಡುವುದನ್ನು ನಿಲ್ಲಿಸಬೇಕು, ಏಕೆಂದರೆ ಅದು ಭ್ರಷ್ಟಾಚಾರದ ಮೂಲವಾಗುತ್ತದೆ ಹಾಗೂ ಸಾರ್ವಜನಿಕ ಆರೋಗ್ಯ ಬಿಕ್ಕಟ್ಟಿಗೆ ಕಾರಣವಾಗಿದೆ
- ಪೌರಕಾರ್ಮಿಕರ ವೃತ್ತಿ ಅಗತ್ಯಗಳಿಗೆ ಬೇಕಾದ ಎಲ್ಲ ಸಾಧನಗಳು ಹಾಗೂ ಸೌಕರ್ಯಗಳನ್ನು ಅವರಿಗೆ ಒದಗಿಸಬೇಕು. ಅವರಿಗೆ ಉಚಿತವಾದ ಸಮಗ್ರ ಆರೋಗ್ಯ ಆರೈಕೆಯನ್ನು ಒದಗಿಸಬೇಕು ಹಾಗೂ ಯಾವುದೇ ಅನಾಹುತ ಸಂಭವಿಸಿದರೆ, ಅದನ್ನು ಕಾರ್ಮಿಕರ ಪರಿಹಾರ ಕಾಯಿದೆ, ೧೯೨೩ ಅಡಿಯಲ್ಲಿ ನಿರ್ವಹಿಸಬೇಕು.
- ತ್ಯಾಜ್ಯವನ್ನು ಮೂಲದಲ್ಲೇ ವಿಂಗಡಿಸುವ ಆಧಾರವನ್ನು ಹೊಂದಿದ ಪ್ರಗತಿಪರ, ಅಗ್ಗದ, ಪರಿಸರ-ಸ್ನೇಹಿ, ಘನ ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮಗಳನ್ನು ಬಿಬಿಎಮ್‌ಪಿ ಅಳವಡಿಸಿಕೊಳ್ಳಬೇಕು.
- ಜೈವಿಕೋ-ವೈದ್ಯಕೀಯ ಹಾಗೂ ಅಪಾಯಕಾರಿ ತ್ಯಾಜ್ಯಗಳನ್ನು ಪೌರ ತ್ಯಾಜ್ಯದೊಂದಿಗೆ ಬೆರೆಸದಂತೆ ಬಿಬಿಎಮ್‌ಪಿ ನೋಡಿಕೊಳ್ಳಬೇಕು.
- ಕಂಪೋಸ್ಟಿಂಗ್ ಹಾಗೂ ಮರುಸಂಸ್ಕರಣೆಯ ಘಟಕಗಳನ್ನು ಎಲ್ಲ ನೆರೆಹೊರೆಗಳಲ್ಲೂ ಸ್ಥಾಪಿಸಬೇಕು.





ಕಂಪೋಸ್ಟಿಂಗ್‌ಗೆ ಅರ್ಹವಲ್ಲದ, ಮರುಸಂಸ್ಕರಣೆಗೆ ಒಳಪಡದ ಹಾಗೂ ಜೈವಿಕೋ-ವೈದ್ಯಕೀಯ ತ್ಯಾಜ್ಯಗಳನ್ನು ಬೇರ್ಪಡಿಸಿ, ಅದನ್ನು ಸೂಕ್ತವಾದ ಭೂಭರ್ತಿಗಳಲ್ಲಿ ತುಂಬಬೇಕು.

- ಪಾಲಿಕೆಯ ಘನ ತ್ಯಾಜ್ಯ, ಅಪಾಯಕಾರಿ ತ್ಯಾಜಗಳು ಹಾಗೂ ಜೈವಿಕೋ-ವೈದ್ಯಕೀಯ ತ್ಯಾಜ್ಯಗಳಿಗೆ ಸಂಬಂಧಿಸಿದ ಕಾನೂನುಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ನೀಡುವ ಕ್ರಮವನ್ನು ಬಿಬಿಎಮ್‌ಪಿ ಸ್ವತಃ ಕೈಗೊಳ್ಳಬೇಕು.
- ಅನ್ವಯವಾಗುವ ಕಾನೂನುಗಳಿಗೆ ಸಂಪೂರ್ಣವಾಗಿ ಒಳಪಟ್ಟ ರೀತಿಯಲ್ಲಿ, ಅದರಲ್ಲೂ ವಿಶೇಷವಾಗಿ ಪರಿಸರ ಪ್ರಭಾವ ಮಾಪನ ಪ್ರಕಟಣೆಗೆ ಒಳಪಟ್ಟ ಭೂಭರ್ತಿಗಳನ್ನು ಅಭಿವೃದ್ಧಿಪಡಿಸಬೇಕು, ಇವು ವಸತಿ ಪ್ರದೇಶಗಳು ಹಾಗೂ ಪರಿಸರ-ಸೂಕ್ಷ್ಮ ಪ್ರದೇಶಗಳ ಬಳಿ ಇರಬಾರದು.
- ತ್ಯಾಜ್ಯವು ರಸ್ತೆ ಬದಿಗಳಲ್ಲಿ, ಕೆರೆಗಳಲ್ಲಿ, ಅರಣ್ಯಗಳಲ್ಲಿ, ಸುತ್ತಲಿರುವ ಕೃಷಿ ಭೂಮಿ, ಇತ್ಯಾದಿ ಪ್ರದೇಶಗಳಲ್ಲಿ ಗುಡ್ಡೆ ಹಾಕದಂತೆ ಬಿಬಿಎಮ್‌ಪಿ ಖಚಿತಪಡಿಸಿಕೊಳ್ಳಬೇಕು.

For enquiries on specific issues please contact:

| Organisation | Contact Person | Ph Number | Email |
|---|---|---|---|
| **Action Aid** | Kshitij Urs | 98454 52242 | Kshithij.Urs@actionaid.org |
| **Alternate Law Forum** | Clifton D'Rozario | 94481 35832 | clifton@altlawforum.org |
| **Aneka** | Shubha Chacko | 92434 46105 | shubha.chacko@gmail.com |
| **Bengaluru Slum Janara Kriya Vedike** | Ganesh S | 93429 26841 | |
| **Centre for Education and Documentation** | Walter Mendonza | 94907 53601 | walter@doccentre.net |
| | Veena | | veena@doccentre.net |
| **Community Health Cell** | Sowmya K R | 25531518 | skssouharda@yahoo.co.in |
| | Premdas E | 25531518 | premdas@sochara.org |
| **Concerned for Working Children** | Kavita Ratna | 94489 90480 | kavitaratna@gmail.com |
| **Environment Support Group** (Environment, Social Justice and Governance Initiatives) | Leo Saldhana | 94483 77403 | leo@esgindia.org |
| | Bhargavi Rao | 94483 77401 | bhargavi@esgindia.org |
| **Garment and Textile Workers Union** | Jayaram K R | 98450 19056 | gatwu@rediffmail.com |
| **Hasiru Usiru** | Vinay Sreenivasa<br>Sheshadri Ramaswamy | 98805 95032<br>9845568182 | vinay.sreenivasa@yahoo.com<br>prepress555@rediffmail.com |
| **Janasahyog** | | 22128569 | |
| **Jana Arogya Andolana Karnataka** | Premdas E | 25531518 | premdas@sochara.org |
| **Kilikili** | Kavita Krishnamoorthy | 98807 42028 | kavitha@kilikili.org |
| **Maraa** | Deepak Sreenivasan | 93437 63497 | deep.srin@gmail.com |
| **Nightingales Medical Trust** | Dr.Radha Murthy | 98440 37381 | nightingales@vsnl.net,<br>nightingalesmt@gmail.com |
| **Parishkaran** | John Joseph | 9449023257 | john@parishkaran.org |
| **Samarthanam Trust for the Disabled** | Ravi G | 98860 32928 | ravi@samarthanam.org |
| **Sangama** | Revathi | 99452 31491 | sangama@sangama.org |
| **Slum Jagattu** | Isaac Arul Selva | 94804 52037 | slumjagatthu@gmail.com |
| **The Avenue Road Traders Associations** | Sridhar G V | 98450 15036 | |
| | Dileep Shah | 93428 80924 | tarca1947@gmail.com |
| **Urban Research Centre** | Gururaj Budhya | 94488 49353 | gururajabudhya@gmail.com |



